# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಆಗಸ್ಟ್ 27, 2022

ಸಂಪುಟ : 49 ಸಂಚಿಕೆ : 105 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




**ಬರಲು ಸಿದ್ಧ ಗಣಪತಿ**

ಶ್ರೀ ಗಣೇಶ ಚತುರ್ಥಿ ಕೆಲವೇ ದಿನಗಳು ಬಾಕಿ ಇವೆ. ಗಣೇಶನ ವಿಗ್ರಹಗಳ ಮಾರಾಟ ಗರಿಗೆದರಿದೆ. ಇತ್ತ ಕಲಾವಿದರು ವಿವಿಧ ಬಗೆಯ ವಿಗ್ರಹಗಳಿಗೆ ಅಂತಿಮ ರೂಪ ನೀಡುವಲ್ಲಿ ಬ್ಯುಸಿಯಾಗಿದ್ದಾರೆ. ದಾವಣಗೆರೆ ಪಿ.ಬಿ. ರಸ್ತೆಯ ಅರುಣಾ ಚಿತ್ರಮಂದಿರದ ಬಳಿ ಕೊಲ್ಕೊತ್ತಾ ಕಲಾವಿದರೊಬ್ಬರು ವಿಗ್ರಹಕ್ಕೆ ಬಣ್ಣ ಹಚ್ಚುತ್ತಿದ್ದಾರೆ.

# ನನಗೆ ನೇತೃತ್ವ ಕೊಡಿ

## ಹೈಕಮಾಂಡ್ ಎದುರು ಬಿ.ಎಸ್. ಯಡಿಯೂರಪ್ಪ ಪ್ರಸ್ತಾಪ



ಬೆಂಗಳೂರು, ಆ. 26 - ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯು ನನ್ನ ನೇತೃತ್ವದಲ್ಲೇ ನಡೆಯಲು ಅವಕಾಶ ಮಾಡಿಕೊಡಿ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ಹೊಣೆ ನನ್ನದು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿ ಸ್ಥಾನದಿಂದ ಇಳಿದ ನಂತರ ವರಿಷ್ಠರನ್ನು ದೆಹಲಿಯಲ್ಲಿ ಇಂದು ಭೇಟಿ ಮಾಡಿದ ಯಡಿಯೂರಪ್ಪ ಅವರು, ವಿಧಾನ ಸಭೆ ಚುನಾವಣೆ ತಂತ್ರಗಾರಿಕೆಗೆ ಸಂಬಂಧಿಸಿದಂತೆ ಸಮಾಲೋಚನೆ ಮಾಡಿದ್ದಾರೆ.

ಪಕ್ಷದ ರಾಷ್ಟ್ರೀಯ ಸಂಸದೀಯ ಮಂಡಳಿಯ ಸದಸ್ಯರನ್ನಾಗಿ ನೇಮಕ ಮಾಡಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಆರ್‌ಎಸ್‌ಎಸ್‌ನ ದತ್ತಾತ್ರೇಯ ಹೊಸಬಾಳೆ, ಕೇಂದ್ರ ಗೃಹ ಸಚಿವ ಅಮಿತ್‌ಷಾ ಅವರಿಗೆ ಧನ್ಯವಾದ ಅರ್ಪಿಸಲು ದೆಹಲಿಗೆ ತೆರಳಿದ್ದರು.

ಮುಖ್ಯಮಂತ್ರಿ ಸ್ಥಾನದಿಂದ ಇಳಿದ ನಂತರ ಬೆಂಗಳೂರಿಗೆ ಬಂದಾಗಲಷ್ಟೇ ವರಿಷ್ಠರನ್ನು ಭೇಟಿ ಮಾಡುತ್ತಿದ್ದರೇ ಹೊರತು, ದೆಹಲಿಗೆ ತೆರಳಿ ವರಿಷ್ಠರೊಂದಿಗೆ ಮಾತುಕತೆ ನಡೆಸುವ ಪ್ರಯತ್ನ ಮಾಡಿರಲಿಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸ್ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ ಎಂಬ ಹಿನ್ನೆಲೆಯಲ್ಲಿ ಯಡಿಯೂರಪ್ಪ ಅವರನ್ನು ಮತ್ತೆ ಮುನ್ನೆಲೆಗೆ ತರಲು ವರಿಷ್ಠರು ಅವರಿಗೆ ಸಂಸದೀಯ ಮಂಡಳಿ ಸದಸ್ಯತ್ವ ನೀಡಿದ್ದು, ಪುತ್ರನಿಗೆ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸ್ಥಾನ ನೀಡುವ ಸಾಧ್ಯತೆ ಇದೆ. ಆರ್‌ಎಸ್‌ಎಸ್ ಮುಖಂಡರ ಆಹ್ವಾನದ ಮೇರೆಗೆ ದೆಹಲಿಗೆ ತೆರಳಿದ ಯಡಿಯೂರಪ್ಪ, ಆರ್‌ಎಸ್‌ಎಸ್‌ನ ಪ್ರಮುಖ ಸಹ ಸಂಚಾಲಕ ದತ್ತಾತ್ರೇಯ ಹೊಸಬಾಳೆ ಜತೆಗೆ ಚುನಾವಣೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಅವಧಿ ಆ.28ಕ್ಕೆ ಪೂರ್ಣಗೊಳ್ಳಲಿದ್ದು, ಅವರಿಂದ ತೆರವಾಗುವ ಸ್ಥಾನಕ್ಕೆ ಹೊಸಬರ ನೇಮಕಾತಿ ಸಂಬಂಧ ಈ ನಾಯಕರು ಚರ್ಚೆ ಮಾಡಿದ್ದಾರೆ.

ಈ ಸ್ಥಾನಕ್ಕೆ ಮೂವರ ಹೆಸರು ಮುನ್ನೆಲೆಗೆ ಬಂದಿದ್ದು, ಆರ್‌ಎಸ್‌ಎಸ್ ಮುಖಂಡರು, ಬಿಜೆಪಿ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದ ನಂತರ ಅಂತಿಮಗೊಳ್ಳಲಿದೆ ಎನ್ನಲಾಗಿದೆ. ವರಿಷ್ಠರನ್ನು (2ನೇ ಪುಟಕ್ಕೆ)

## ಬಳ್ಳಾರಿ, ಚಿತ್ರದುರ್ಗ, ತುಮಕೂರುಗಳಲ್ಲಿ ಗಣಿಗಾರಿಕೆ ಮಿತಿ ಹೆಚ್ಚಳ

ನವದೆಹಲಿ ಆ. 26 – ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಾರ್ಷಿಕ ಕಬ್ಬಿಣದ ಅದಿರಿನ ಗಣಿಗಾರಿಕೆ ಮಿತಿಯನ್ನು ಸುಪ್ರೀಂ ಕೋರ್ಟ್ ಹೆಚ್ಚಿಸಿದೆ.

ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಾರ್ಷಿಕ ಅದಿರು ಉತ್ಪಾದನೆಯ ಮಿತಿಯನ್ನು ಈಗಿರುವ 7 ಎಂ.ಎಂ.ಟಿ.ಗಳಿಂದ 15 ಎಂ.ಎಂ.ಟಿ.ಗಳಿಗೆ ಹೆಚ್ಚಿಸಲಾಗಿದೆ. ಬಳ್ಳಾರಿಯ ಮಿತಿಯನ್ನು 28 ಎಂ.ಎಂ.ಟಿ.ಗಳಿಂದ 35 ಎಂ.ಎಂ.ಟಿಗೆ (2ನೇ ಪುಟಕ್ಕೆ)

## ಪಕ್ಷಗಳ ಉಚಿತ ಕೊಡುಗೆ ವಿಚಾರಣೆ ತ್ರಿಸದಸ್ಯ ಪೀಠಕ್ಕೆ

ನವದೆಹಲಿ, ಆ. 26 – ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ನೀಡುವ ಉಚಿತ ಕೊಡುಗೆಗಳ ಭರವಸೆ ಬಗ್ಗೆ ಸುದೀರ್ಘ ವಿಚಾರಣೆಯ ಅಗತ್ಯವಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ತ್ರಿಸದಸ್ಯ ಪೀಠಕ್ಕೆ ವಹಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠ ಈ ಬಗ್ಗೆ ಆದೇಶ ಹೊರಡಿಸಿದೆ. ನ್ಯಾಯಮೂರ್ತಿ ರಮಣ ಅವರು ತಮ್ಮ ಅಧಿಕಾರವಧಿಯ ಕೊನೆಯ (3ನೇ ಪುಟಕ್ಕೆ)

# ಆಡಳಿತ ವಿಕೇಂದ್ರೀಕರಣದಿಂದ ಗ್ರಾಮಗಳ ಅಭಿವೃದ್ಧಿ

## ಪಲ್ಲಾಗಟ್ಟೆ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ



ಜಗಳೂರು, ಆ.26- ತಾಲ್ಲೂಕಿನ ಕೆರೆ ತುಂಬಿಸುವ ಯೋಜನೆ ಸಾಕಾರಗೊಂಡಿದ್ದು, ರೈತರಿಗೆ ನೀರಾವರಿ ಸೌಲಭ್ಯ ಲಭಿಸಲಿದೆ. ಸರ್ಕಾರ ಅಧಿಕಾರ ಆಡಳಿತ ವಿಕೇಂದ್ರೀಕರಣಕ್ಕೆ ಪ್ರಾಶಸ್ತ್ಯ ನೀಡಿ ಗ್ರಾ.ಪಂ, ತಾ.ಪಂ, ಜಿಲ್ಲಾ ಪಂಚಾಯಿತಿ ಗಳಿಗೆ ವರ್ಷದಿಂದ ವರ್ಷಕ್ಕೆ ಅನುದಾನ ಹೆಚ್ಚಿಸುತ್ತಿದೆ. ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ತಾಲ್ಲೂಕಿನ ಪಲ್ಲಾಗಟ್ಟೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಶುಕ್ರವಾರ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ "ಗ್ರಾಮ ವಾಸ್ತವ್ಯ" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯ ನಂತರ ದೇಶದಲ್ಲಿ ಲಭ್ಯವಿರುವ ಸಂಪನ್ಮೂಲ ಸದ್ಬಳಕೆ ಮಾಡಿಕೊಂಡು ಜನತೆಗೆ ಸರ್ಕಾರ ಸೌಲಭ್ಯಗಳನ್ನು ಒದಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಬಂದಿದೆ. ಜನಸಂಖ್ಯೆ ಹೆಚ್ಚಾದಂತೆ ಆಹಾರದ ಅವಶ್ಯಕತೆಯೂ ಹೆಚ್ಚುತ್ತಿದೆ. ಪ್ರಸ್ತುತ ಆಹಾರ ಉತ್ಪಾದನೆ ಹೆಚ್ಚಳದಿಂದ ಆಹಾರಕ್ಕಾಗಿ ಪರದಾಡುವಂತಿಲ್ಲ. ರೈತರು ಆಹಾರ ಉತ್ಪಾದನಾ ಬೆಳೆಗಳಿಗೆ ಒತ್ತು ನೀಡಿ ಸ್ವಾವಲಂಬಿ ಬದುಕು ಸಾಗಿಸಬೇಕು ಎಂದು ಸಲಹೆ ನೀಡಿದರು.

ತಾಲ್ಲೂಕಿನ ಪ್ರತಿ ಗ್ರಾಮಗಳಲ್ಲಿಯೂ ಯಾವುದೇ ಗರ್ಭಿಣಿ ಮಹಿಳೆಯರ ಸುರಕ್ಷಿತ ಹೆರಿಗೆಯ ಬಗ್ಗೆ ಆರೋಗ್ಯ ಇಲಾಖೆ ಕ್ರಮವಹಿಸಬೇಕು. ಆಶಾ ಕಾರ್ಯಕರ್ತೆಯರು ಜವಾಬ್ದಾರಿ ವಹಿಸಬೇಕು ಎಂದು ಜಿಲ್ಲಾ ಅಧಿಕಾರಿಗಳು ಸೂಚಿಸಿದರು.

ಜನರ ಸಮಸ್ಯೆಗಳನ್ನು ಆಲಿಸಲು ಸರ್ಕಾರವೇ ಜನರ ಮನೆಯ ಬಾಗಿಲಿಗೆ ಬಂದಿದೆ. ಸಮಸ್ಯೆಗಳನ್ನು ಆಲಿಸಿ, ಸ್ಪಂದಿಸಿ ಕೆಲಸ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದ್ದು ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜಿ.ಪಂ ಸಿಇಓ ಡಾ.ಚನ್ನಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಕೂಲಿ ಕಾರ್ಮಿಕರು ಮನರೇಗಾ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು. ಗ್ರಾಮಗಳ ಸ್ವಚ್ಚತೆ, ಅಭಿವೃದ್ಧಿಗೆ ಪಿಡಿಓಗಳ ಮೂಲಕ ಕ್ರಮಕೈಗೊಳ್ಳಲಾಗಿದೆ ಎಂದು ಹೇಳಿದರು.

ಗ್ರಾಮದಲ್ಲಿ ವಿವಿಧ ಇಲಾಖೆಗಳ ಸೌಲಭ್ಯಗಳಿಗಾಗಿ ಗ್ರಾಮಸ್ಥರಿಂದ 92 ಅರ್ಜಿ ಸ್ವೀಕೃತವಾದವು. ಸಂಜೆ 6 ಗಂಟೆಗೆ ರಾಜ್ಯದ ವಿವಿಧ ಜಿಲ್ಲೆಗಳ ಕಲಾ ತಂಡಗಳಿಂದ (2ನೇ ಪುಟಕ್ಕೆ)

## ಅತಿವೃಷ್ಟಿ: 1,100 ಕೋಟಿ ರೂ. ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ

ಬೆಂಗಳೂರು, ಆ. 26 - ರಾಜ್ಯದಲ್ಲಿ ಇತ್ತೀಚೆಗೆ ಮಳೆಯಿಂದಾದ ಹಾನಿಯ ಹಿನ್ನೆಲೆಯಲ್ಲಿ 1102 ಕೋಟಿ ರೂ ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ್ ಈ ವಿಷಯ ತಿಳಿಸಿದರು. ಕಳೆದ ನಾಲ್ಕು ತಿಂಗಳಿನಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸುರಿದ ಮಳೆಯಿಂದ ಅಪಾರ ಹಾನಿಯಾಗಿದ್ದು, ಈ ಹಿನ್ನೆಲೆಯಲ್ಲಿ ಪರಿಹಾರ ಕೋರುವ ಸಂಬಂಧ ಮನವಿ ಪತ್ರ ಸಿದ್ಧವಾಗಿದೆ ಎಂದರು.

ಮಳೆಯಿಂದ ಹಾನಿಗೊಳಗಾದ ಜಿಲ್ಲೆಗಳಿಂದ ಆಯಾ ಜಿಲ್ಲಾಧಿಕಾರಿಗಳು ವರದಿ ಕಳಿಸಿದ್ದು,ಇದರ ಆಧಾರದ ಮೇಲೆ 1102 ಕೋಟಿ ರೂ.ಗಳ ಪರಿಹಾರ ಕೋರಲು ನಿರ್ಧರಿಸಲಾಗಿದೆ. ಮಳೆಯಿಂದ ರಸ್ತೆ, ಸೇತುವೆ, ಕಟ್ಟಡ ಸೇರಿದಂತೆ ಹಲವು ರೀತಿಯಲ್ಲಿ ನಷ್ಟವಾಗಿದೆ ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಇದುವರೆಗೆ ಮಳೆಯಿಂದ ಸಂಭವಿಸಿದ ನಷ್ಟಕ್ಕೆ ಪ್ರತಿಯಾಗಿ ಪರಿಹಾರ ಕೋರಲು ತೀರ್ಮಾನಿಸಲಾಗಿದೆ ಎಂದರು. ರಾಜ್ಯದ ಹಲ ಜಿಲ್ಲೆಗಳಲ್ಲಿ ಭೂಕಂಪ ಸಂಭವಿಸಿದೆ. ಗುಡ್ಡಗಳು ಕುಸಿದಿವೆ ಎಂದ ಅವರು, (3ನೇ ಪುಟಕ್ಕೆ)

## ಕೊಡುಗೆಗಳಿಂದ ರಾಜ್ಯಗಳು ದಿವಾಳಿಯತ್ತ

ನವದೆಹಲಿ, ಆ. 26 – ತೆರಿಗೆದಾರರ ಹಣದಿಂದ ಉಚಿತ ಕೊಡುಗೆಗಳನ್ನು ನೀಡಲಾಗುತ್ತದೆ. ಇವುಗಳಿಂದ ರಾಜ್ಯಗಳು ದಿವಾಳಿಯ ಕಡೆಗೆ ಸಾಗುವುದು ಅನಿವಾರ್ಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಉಚಿತ ಕೊಡುಗೆಗಳನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಗಳನ್ನು ತ್ರಿಸದಸ್ಯ ಪೀಠಕ್ಕೆ ವರ್ಗಾಯಿಸುವ ಆದೇಶದಲ್ಲಿ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಉಚಿತ ಕೊಡುಗೆಗಳ ಕಾರಣದಿಂದಾಗಿ ರಾಜ್ಯಗಳು (2ನೇ ಪುಟಕ್ಕೆ)

# ನೀರಾವರಿ ಯೋಜನೆ ಪುನರಾರಂಭದ ಸಭೆ ವಿಫಲ



**ಹೆಚ್ಚಿನ ಪರಿಹಾರಕ್ಕೆ ರೈತರ ಪಟ್ಟು: ಮತ್ತೊಮ್ಮೆ ಸಭೆ ನಡೆಸುವುದಾಗಿ ಹೇಳಿದ ಸಂಸದ ಸಿದ್ದೇಶ್ವರ**

ಹರಪನಹಳ್ಳಿ, ಆ 26- ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ರೈತರಿಗೆ ಪರಿಹಾರ ಕೊಡುವ ಸಂಬಂಧ ಸ್ಥಗಿತಗೊಂಡಿದ್ದ ತಾಲ್ಲೂಕಿನ ಕೆರೆಗಳಿಗೆ ನದಿ ನೀರು ಹಾಯಿಸುವ ಯೋಜನೆ ಪುನರಾರಂಭಕ್ಕೆ ಪಟ್ಟಣದ ತಾಲ್ಲೂಕು ಆಡಳಿತ ಸೌಧದಲ್ಲಿ ಆಯೋಜಿಸಿದ್ದ ಸಭೆ ಇತ್ಯರ್ಥವಾಗದೆ ಮುಂದಕ್ಕೆ ಹೋದ ಘಟನೆ ಶುಕ್ರವಾರ ಜರುಗಿತು.

ಸಭೆಯಲ್ಲಿ ಪಾಲ್ಗೊಂಡಿದ್ದ ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ ಅವರು 2019ರ ಆಗಸ್ಟ್ ವೇಳೆಗೆ ಪೂರ್ಣಗೊಳ್ಳಬೇಕಿದ್ದ ಈ ಯೋಜನೆ ಏಕೆ ಪೂರ್ಣಗೊಂಡಿಲ್ಲ? ವಿಳಂಬ ಹೇಗಾಯಿತು? ಹೀಗಾದರೆ ನಾವು ಚುನಾವಣೆಗೆ ಹೇಗೆ ಹೋಗಬೇಕು ಎಂದು ನೀರಾವರಿ ಹಾಗೂ ಗುತ್ತಿಗೆ ಪಡೆದ ಎಲ್ ಅಂಡ್ ಟಿ. ಕಂಪನಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಕಂಪನಿಯ ಅಧಿಕಾರಿ ಸುಬ್ಬರಾಯುಡು ಮೊದಲಿಗೆ ಕೋವಿಡ್ ಕಾರಣಕ್ಕೆ ತಡವಾಯಿತು. ನಂತರ ಕಾಮಗಾರಿಗೆ ಸಂಬಂಧ ಪಟ್ಟಂತೆ 14 ಟವರ್ ಗಳ ಕಾಮಗಾರಿ ಪೂರ್ಣಗೊಂಡಿದೆ. ಇನ್ನೂ 6 ಟವರ್ ಗಳ ನಿರ್ಮಾಣ ಬಾಕಿ ಇದೆ. ಅದಕ್ಕೆ 5 ಜನ ರೈತರು ಭೂ ಸ್ವಾಧೀನಕ್ಕೆ ಪರಿಹಾರ ಕಡಿಮೆಯಾಗಿದೆ ಎಂದು ವಿರೋಧ ವ್ಯಕ್ತ ಪಡಿಸಿ ಕಾಮಗಾರಿಗೆ ತಡೆಯೊಡ್ಡಿದ್ದಾರೆ ಎಂದು ವಿವರಿಸಿದರು.

ಭೂಮಿ ಕಳೆದುಕೊಂಡ ರೈತ ನಿಟ್ಟೂರು ನಾಗರಾಜ್ ಅವರ 230 ಅಡಿಕೆ ಗಿಡಗಳು ಹೋಗುತ್ತವೆ. ಸೂಕ್ತ ಪರಿಹಾರ ಕೊಡಿ ಎಂದು ಕೋರಿದರು. ಹಲುವಾಗಲು ಗುಡ್ಡಪ್ಪ ಜಮೀನಿನ (3ನೇ ಪುಟಕ್ಕೆ)

## ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವ ನಾಳೆ



ದಾವಣಗೆರೆ, ಆ. 26- ನಗರದ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವು ನಾಡಿದ್ದು ದಿನಾಂಕ 28ರ ಭಾನುವಾರ ನಡೆಯಲಿದೆ.

ಅಂದು ಬ್ರಾಹ್ಮೀ ಶುಭ ಮುಹೂರ್ತದಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ, ಪ್ರಸಾದ ವಿನಿಯೋಗ ಏರ್ಪಾಡಾಗಿದ್ದು, ನಂತರ ಬೆಳಿಗ್ಗೆ 9.30 ರಿಂದ ರಾಜ ಬೀದಿಗಳಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಯ ರಥೋತ್ಸವ ಜರುಗಲಿದೆ. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಪ್ರಪಂಚದಾದ್ಯಂತ ತಾಂಡವವಾಡಿದ ಮಹಾಮಾರಿ ಕೊರೊನಾ ಅಲೆಯ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿ ಅನ್ವಯ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವ (4ನೇ ಪುಟಕ್ಕೆ)

# ಸೆಪ್ಟೆಂಬರ್‌ನಿಂದ 'ರೈತ ಶಕ್ತಿ'

**ಎಕರೆಗೆ 250 ರೂ. ಡೀಸೆಲ್ ಸಹಾಯಧನ**

ಬೆಂಗಳೂರು, ಆ. 26 - ಕೃಷಿ ಚಟುವಟಿಕೆಯಲ್ಲಿ ಯಂತ್ರೋಪಕರಣಗಳನ್ನು ಪ್ರೋತ್ಸಾಹಿಸಿ, ಇಂಧನದ ವೆಚ್ಚದ ಹೊರೆಯನ್ನು ಕಡಿಮೆ ಮಾಡುವ ರೈತ ಶಕ್ತಿ ಯೋಜನೆ ಸೆಪ್ಟೆಂಬರ್‌ನಿಂದ ಜಾರಿಗೊಳ್ಳಲಿದೆ.

ಕೃಷಿ ಸಚಿವ ಬಿ.ಸಿ. ಪಾಟೀಲ್ ಪತ್ರಿಕಾ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದು, ಈ ಯೋಜನೆಯಿಂದ ರೈತರಿಗೆ ಪ್ರತಿ ಎಕರೆಗೆ 250 ರೂ.ನಂತೆ ಗರಿಷ್ಠ ಐದು ಎಕರೆವರೆಗೂ ಡೀಸೆಲ್ ಸಹಾಯಧನ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ ರೈತ ಶಕ್ತಿ ಯೋಜನೆ ಪ್ರಸ್ತಾಪ ಮಾಡಿದ್ದರು. ಇದೀಗ ಇಲಾಖೆ ಅದನ್ನು ಅನುಷ್ಠಾನಗೊಳಿಸಿ, ರೈತರ ನೆರವಿಗೆ ಸರ್ಕಾರ ಮುಂದಾಗಿದೆ.

ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರ ಆದೇಶ ಹೊರಡಿಸಿದ್ದು, ರೈತರಿಗೆ ಕೃಷಿ ಇಲಾಖೆಯ ಎಲ್ಲಾ ಯೋಜನೆಗಳನ್ನು ಫ್ರೂಟ್ಸ್ ಪೋರ್ಟಲ್ ಮೂಲಕ ನೋಂದಣಿ, ಗುರುತಿನ ಸಂಖ್ಯೆ ಬಳಸಿ, ಕಿಸಾನ್ ತಂತ್ರಾಂಶದ ಮೂಲಕವೇ ಅನುಷ್ಠಾನ ಮಾಡಲಾಗುತ್ತಿದೆ. ಅದೇ ರೀತಿಯಲ್ಲಿ ಈ ಪೋರ್ಟಲ್‌ನಲ್ಲಿ ನೋಂದಣಿಗೊಂಡ ಎಲ್ಲ ರೈತರಿಗೆ ಶಕ್ತಿ ಯೋಜನೆಯನ್ನು ಕಿಸಾನ್ ತಂತ್ರಾಂಶ ಬಳಸಿಕೊಂಡು, ನೇರ ಹಣ ವರ್ಗಾವಣೆ ಮೂಲಕವೇ ಯೋಜನೆ ಅನುಷ್ಠಾನ ಮಾಡಲಾಗುವುದು.

ಪೋರ್ಟಲ್‌ನಲ್ಲಿ (2ನೇ ಪುಟಕ್ಕೆ)


# ಹಿರಿಯ ನಾಯಕ ಗುಲಾಂ ನಬಿ ಆಜಾದ್ ಕಾಂಗ್ರೆಸ್‌ಗೆ ರಾಜೀನಾಮೆ

ನವದೆಹಲಿ, ಆ. 26 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಂದಾಗಿ ಪಕ್ಷ ಸಂಪೂರ್ಣ ನಾಶವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಹಿರಿಯ ನಾಯಕ ಗುಲಾಂ ನಬಿ ಆಜಾದ್, ರಾಹುಲ್ ಅವರ ಭದ್ರತಾ ಸಿಬ್ಬಂದಿಯೇ ನಿರ್ಧಾರ ತೆಗೆದುಕೊಳ್ಳುವ ಮಟ್ಟಕ್ಕೆ ಪಕ್ಷದ ಪರಿಸ್ಥಿತಿ ಹೋಗಿದೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷ ಸಂಪೂರ್ಣ ನಾಶವಾಗಿದೆ. ಪಕ್ಷದಲ್ಲಿನ ಸಮಾಲೋಚನಾ ವ್ಯವಸ್ಥೆಯು ರಾಹುಲ್ ಗಾಂಧಿ ಕಾರಣದಿಂದ ಸಂಪೂರ್ಣ ಹಾಳಾಗಿದೆ ಎಂದಿರುವ ಅವರು, ಆಂತರಿಕ ಚುನಾವಣೆ ಹೆಸರಿನಲ್ಲಿ ಪಕ್ಷದ ನಾಯಕತ್ವ ವಂಚನೆ ಮಾಡುತ್ತಿದೆ ಎಂದಿದ್ದಾರೆ.

ಐದು ಪುಟಗಳ ರಾಜೀನಾಮೆ ಪತ್ರವನ್ನು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕಳಿಸಿರುವ ಆಜಾದ್, ಸೋನಿಯಾ ಹೆಸರಿಗೆ ಮಾತ್ರ ನಾಯಕರಾಗಿದ್ದಾರೆ. ಎಲ್ಲಾ ಪ್ರಮುಖ ನಿರ್ಧಾರಗಳನ್ನು ರಾಹುಲ್ ಗಾಂಧಿ ತೆಗೆದುಕೊಳ್ಳುತ್ತಿದ್ದಾರೆ. ಇನ್ನೂ ಕೆಟ್ಟ ಪರಿಸ್ಥಿತಿ ಎಂದರೆ ಅವರ ಭದ್ರತಾ ಸಿಬ್ಬಂದಿ ಹಾಗೂ ಆಪ್ತ ಸಹಾಯಕರೇ ನಿರ್ಧಾರ ತೆಗೆದುಕೊಳ್ಳುವವರಾಗಿದ್ದಾರೆ ಎಂದಿದ್ದಾರೆ.

ಐದು ದಶಕಗಳ ಕಾಲ ಪಕ್ಷದ ಜೊತೆ ಹೊಂದಿದ್ದ ಸಂಬಂಧಕ್ಕೆ ವಿದಾಯ ಹೇಳಿರುವ ಆಜಾದ್, ಪಕ್ಷ ನಡೆಸುತ್ತಿರುವ ಭಟ್ಟಂಗಿಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಇಚ್ಛಾಶಕ್ತಿ ಹಾಗೂ ಸಾಮರ್ಥ್ಯ ಎರಡನ್ನೂ ಕಳೆದುಕೊಂಡಿದ್ದೇನೆ ಎಂದಿದ್ದಾರೆ.



- ಕಾಂಗ್ರೆಸ್ ಸಂಪೂರ್ಣ ನಾಶಕ್ಕೆ ರಾಹುಲ್ ಕಾರಣ
- ರಾಹುಲ್ ಗಾಂಧಿ ಭದ್ರತಾ ಸಿಬ್ಬಂದಿ ಪಕ್ಷದ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ

\- ಗುಲಾಬ್ ನಬಿ ಆಜಾದ್

ರಾಹುಲ್ ಗಾಂಧಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಆಜಾದ್, ರಿಮೋಟ್ ಕಂಟ್ರೋಲ್ ಪದ್ಧತಿಯು ಯು.ಪಿ.ಎ. ಸರ್ಕಾರದ ಸಾಂಸ್ಥಿಕ ಪಾವಿತ್ರ್ಯತೆ ಹಾಳು ಮಾಡಿತ್ತು. ಈಗ ಅದೇ ಪದ್ಧತಿ ಕಾಂಗ್ರೆಸ್ ಪಕ್ಷವನ್ನು ಹಾಳು ಮಾಡುತ್ತಿದೆ ಎಂದಿದ್ದಾರೆ.

ರಾಹುಲ್ ಗಾಂಧಿ ರಾಜಕೀಯಕ್ಕೆ ಬಂದ ನಂತರ, ವಿಶೇಷವಾಗಿ 2013ರ ಜನವರಿಯಲ್ಲಿ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿದ ನಂತರ ಪಕ್ಷದಲ್ಲಿದ್ದ ಸಮಾಲೋಚನಾ ವ್ಯವಸ್ಥೆಯನ್ನೇ ನಾಶಗೊಳಿಸಲಾಗಿದೆ.

ಎಲ್ಲಾ ಹಿರಿಯ ಹಾಗೂ ಅನುಭವಿ ನಾಯಕರನ್ನು ಮೂಲೆಗುಂಪು ಮಾಡಲಾಗಿದೆ. ಹೊಸ ಭಟ್ಟಂಗಿ ಹಾಗೂ ಅನುಭವರಹಿತ ಹೊಗಳುಭಟ್ಟರು ಪಕ್ಷ ನಡೆಸುತ್ತಿದ್ದಾರೆ ಎಂದು ಆಜಾದ್ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷವು ರಾಷ್ಟ್ರಮಟ್ಟದಲ್ಲಿ ರಾಜಕೀಯ ಅವಕಾಶವನ್ನು ಬಿಜೆಪಿಗೆ ಬಿಟ್ಟುಕೊಟ್ಟಿದೆ. ರಾಜ್ಯ ಮಟ್ಟದಲ್ಲಿ ಅವಕಾಶವನ್ನು ಪ್ರಾಂತೀಯ ಪಕ್ಷಗಳಿಗೆ ಕೊಡಲಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಗಂಭೀರವಲ್ಲದ ವ್ಯಕ್ತಿಯ ಕೈಗೆ ಪಕ್ಷ ಕೊಟ್ಟಿರುವುದೇ ಇದಕ್ಕೆ ಕಾರಣ ಎಂದು ಆಜಾದ್ ಹೇಳುವ ಮೂಲಕ ರಾಹುಲ್‌ರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಕಾಂಗ್ರೆಸ್ ಪಕ್ಷ ನಡೆಸಲು ಉದ್ದೇಶಿಸಿರುವ ಭಾರತ್ ಜೋಡೋ ಯಾತ್ರೆಯ ಬಗ್ಗೆ ಪ್ರಸ್ತಾಪಿಸಿರುವ ಆಜಾದ್, ಇದರ ಬದಲು ದೇಶಾದ್ಯಂತ 'ಕಾಂಗ್ರೆಸ್ ಜೋಡೋ' ಯಾತ್ರೆ' ನಡೆಸಬೇಕಿತ್ತು ಎಂದಿದ್ದಾರೆ.

ಆದರೆ, ಈಗ ಪಕ್ಷ ಮತ್ತೆ ಚೇತರಿಸಿಕೊಳ್ಳಲಾಗದ ಹಂತಕ್ಕೆ ತಲುಪಿದೆ. ಪಕ್ಷದ ನಾಯಕತ್ವ ವಹಿಸಿಕೊಳ್ಳಲು 'ನಕಲಿ'ಗಳನ್ನು ತಯಾರು ಮಾಡಲಾಗುತ್ತಿದೆ. ಪರಿಸ್ಥಿತಿ ಸರಿಪಡಿಸಲಾಗದ ಹಂತಕ್ಕೆ ಹೋಗಿರುವ ಕಾರಣ, ಈ ಪ್ರಯತ್ನವೂ ಫಲ ನೀಡುವುದಿಲ್ಲ. ಮುಂದೆ ನಾಯಕತ್ವಕ್ಕೆ ಆಯ್ಕೆ ಮಾಡಲ್ಪಡುವ ವ್ಯಕ್ತಿ ಸಹ ಸೂತ್ರದ ಬೊಂಬೆಯಾಗಿರುತ್ತಾನೆ ಎಂದು ಆಜಾದ್ ಹೇಳಿದ್ದಾರೆ.

2014ರ ನಂತರ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷವು ಎರಡು ಲೋಕಸಭಾ ಚುನಾವಣೆಗಳಲ್ಲಿ ಹೀನಾಯವಾಗಿ ಸೋತಿದೆ. 2014ರಿಂದ 2022ರ ನಡುವೆ ನಡೆದ 49 ವಿಧಾನಸಬಾ ಚುನಾವಣೆಗಳ ಪೈಕಿ 39ರಲ್ಲಿ ಸೋತಿದೆ ಎಂಬುದನ್ನು ಆಜಾದ್ ಉಲ್ಲೇಖಿಸಿದ್ದಾರೆ.

ನಾಲ್ಕು ಚುನಾವಣೆಗಳಲ್ಲಿ ಮಾತ್ರ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ. ಆರು ಚುನಾವಣೆಯಲ್ಲಿ ಮೈತ್ರಿ ಮೂಲಕ ಅಧಿಕಾರಕ್ಕೆ (2ನೇ ಪುಟಕ್ಕೆ)


## ದ್ವಿತೀಯ ವರ್ಷದ ಪುಣ್ಯ ಸ್ಮರಣೆ



**ದಿ|| ಕೆ.ಆರ್. ಮಂಜುನಾಥ್, ದಾವಣಗೆರೆ.**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ನಿಮ್ಮ ನೆನಪು ನಮಗೆ ಸದಾ ಹಚ್ಚ ಹಸಿರು, ಸ್ಫೂರ್ತಿದಾಯಕ, ನಿಮ್ಮ ಪ್ರೀತಿ, ಆರೈಕೆ, ನೆನಪುಗಳೇ ನಮಗೆ ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ...

ಪತ್ನಿ : ಶ್ರೀಮತಿ ಸುಪ್ರಭಾ ಮಂಜುನಾಥ್, ಮಗ : ಕೆ.ಎಂ. ಗಗನ್
ತಮ್ಮ : ಶ್ರೀ ಕೆ.ಆರ್. ವಿಜಯಕುಮಾರ್, ಶ್ರೀಮತಿ ಲೀಲಾ
ಮಗ : ಕೆ.ವಿ. ಸಂಕೇತ್, ದಾವಣಗೆರೆ.
ಶ್ರೀ ಜಿ. ಎಸ್. ನಾಗರಾಜ್, ಶ್ರೀಮತಿ ಇಂದಿರ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ದಾವಣಗೆರೆ.
ಕರಿಯಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ.
ನಾಡಿಗರ ವಂಶಸ್ಥರು, ಬೆಳವನೂರು. ಹಾಗೂ ಬಂಧು-ಮಿತ್ರರು.

# ದಲಿತರಿಗಿಂತ ದಲಿತಳಾಗಿದ್ದ ಸ್ತ್ರೀಯರಿಗೆ ಸ್ವಾತಂತ್ರ್ಯ ಕಲ್ಪಿಸಿದ್ದು ಬಸವಣ್ಣ

## 'ಮತ್ತೆ ಕಲ್ಯಾಣ' ಕಾರ್ಯಕ್ರಮದಲ್ಲಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ



ಅರಸೀಕೆರೆ, ಆ. 26- ಬಸವಣ್ಣನವರು ಕೊಟ್ಟ ಸ್ವಾತಂತ್ರ್ಯವನ್ನು ಯಾವ ಮಹಿಳೆಯರೂ ಮರೆಯುವಂತಿಲ್ಲ ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಇಲ್ಲಿನ 'ಮತ್ತೆ ಕಲ್ಯಾಣ' ಸಮಿತಿ – ಜಾಜೂರು ಮತ್ತು ಸಾಣೇಹಳ್ಳಿ ಶ್ರೀ ತರಳಬಾಳು ಜಗದ್ಗುರು ಶಾಖಾಮಠದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮತ್ತೆ ಕಲ್ಯಾಣ' ಕಾರ್ಯಕ್ರಮದ ನೇತೃತ್ವ ವಹಿಸಿ ಶ್ರೀಗಳು ಮಾತನಾಡಿದರು.

ಒಂದು ಕಾಲದಲ್ಲಿ ಮಹಿಳೆ ದಲಿತರಿಗಿಂತ ದಲಿತಳಾಗಿದ್ದಳು. ಆಕೆಗೆ ಯಾವುದೇ ಸ್ವಾತಂತ್ರ್ಯವಿರಲಿಲ್ಲ. ಆಕೆ ಸ್ವತಂತ್ರವಾಗಿ ಯೋಚಿಸಲು, ಅಭಿವ್ಯಕ್ತಿಸಲು ಅವಕಾಶ ಕೊಟ್ಟಿದ್ದು ಹನ್ನೆರಡನೇ ಶತಮಾನದ ಅನುಭವ ಮಂಟಪ. ಅಕ್ಕಮಹಾದೇವಿಯಂಥ ಮತ್ತೊಬ್ಬ ಧೀಮಂತ ಮಹಿಳೆಯನ್ನು ಜಗತ್ತಿನಲ್ಲಿ ಕಾಣಲು ಸಾಧ್ಯವಿಲ್ಲ. ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡ, ಉಳಿದ ಗಂಡಂದಿರನ್ನು ಒಲೆಯಲಿಕ್ಕುವೆ ಎನ್ನುವಳು. ಅಲ್ಲಮ ಕೇಳುವ ಪ್ರಶ್ನೆಗಳಿಗೆ ಅನುಭವ ಮಂಟಪದಲ್ಲಿ ದಿಟ್ಟತನದಿಂದ ಉತ್ತರಿಸಿ ತನ್ನ ಗಟ್ಟಿ ವ್ಯಕ್ತಿತ್ವವನ್ನು ಸಾಬೀತು ಪಡಿಸುವಳು. ಇದು ಇಂದಿನ ಅಧಿಕಾರಿಗಳಲ್ಲಿ, ಮಠಾಧಿಪತಿಗಳಲ್ಲಿ, ರಾಜಕಾರಣಿಗಳಲ್ಲಿ, ಶ್ರೀಮಂತರು ಮೊದಲಾದ ವರಲ್ಲಿ ಇದ್ದಿದ್ದರೆ 'ಮತ್ತೆ ಕಲ್ಯಾಣ'ದ ಅವಶ್ಯಕತೆ ಬರುತ್ತಿರಲಿಲ್ಲ.

ಇಂದಿನ ವರ್ತಮಾನ ತುಂಬ ಕರಾಳವಾಗಿದೆ. ಮನಸ್ಸು ಕೊಳಕಾಗಿದೆ. ಬೆಳಕಿಗಾಗಿ ಬಸವಾದಿ ಶರಣರ ಕಡೆ ಮುಖ ಮಾಡಬೇಕಾಗಿದೆ. ಅಂದು ಅನೇಕ ಶರಣೆಯರು ಪುರುಷರಿಗಿಂತ ಕಡಿಮೆಯಿಲ್ಲ ಎಂದು ತೋರಿಸಿಕೊಟ್ಟರು. ಮಕ್ಕಳಿಗೆ ವಚನ ಸಂಸ್ಕಾರ ಕೊಟ್ಟರೆ ಅವರೇ ಮುಂದೆ ಬಸವಣ್ಣ, ಅಕ್ಕ, ಅಲ್ಲಮ ಮೊದಲಾದ ಶರಣರಾಗುವರು. ಮಕ್ಕಳಿಗೆ ಕನಿಷ್ಟ ಹತ್ತತ್ತು ವಚನಗಳನ್ನು ಕಲಿಸಿದರೆ ಖಂಡಿತಾ ಅವರ ಬದುಕು ಬದಲಾಗುವುದು. ದುಡ್ಡು ಯಾರಿಗೂ ನೆಮ್ಮದಿ ನೀಡುವುದಿಲ್ಲ; ಗುಣವೇ ಶಾಶ್ವತವಾದುದು. ಮನೆ ಕಟ್ಟಬಹುದು; ಮನಸ್ಸು ಕಟ್ಟುವುದು ಕಷ್ಟ. ಮನಸ್ಸಿನಲ್ಲಿ ಸದ್ಭಾವನೆಯನ್ನು ತುಂಬಿಕೊಂಡರೆ ವ್ಯಕ್ತಿತ್ವ ವಿಕಾಸವಾಗುವುದು. ಇಂಥ ಕಾರ್ಯಕ್ರಮ ಎಲ್ಲರಿಗೂ ಬೇಕಾಗಿದೆ ಎನ್ನುವುದಕ್ಕೆ ದಿನವೂ ಸಾವಿರಾರು ಜನ ಸೇರುತ್ತಿರುವುದೇ ಸಾಕ್ಷಿ. ಪರಸ್ಪರ ಸಹಕಾರದಿಂದ ಮಾತ್ರ ಕಲ್ಯಾಣ ರಾಜ್ಯದ ನಿರ್ಮಾಣ ಸಾಧ್ಯ ಎಂದರು.

ಸಾನ್ನಿಧ್ಯ ವಹಿಸಿದ್ದ ತಿಪಟೂರಿನ ಷಡಕ್ಷರ ಮಠದ ಶ್ರೀ ರುದ್ರಮುನಿ ಮಹಾಸ್ವಾಮಿಗಳು ಮಾತನಾಡಿ, ಇಂದು ಮಲಿನಗೊಂಡಿರುವ ಮನಕ್ಕೆ 'ಮತ್ತೆ ಕಲ್ಯಾಣ'ದ ಮೂಲಕ ಅಂದಿನ ಅನುಭವ ಮಂಟಪವನ್ನು ಇಂದು ಮತ್ತೆ ನಮ್ಮೂರಿಗೆ ಪಂಡಿತಾರಾಧ್ಯ ಶ್ರೀಗಳು ತಂದಿದ್ದಾರೆ. ಇದು ಜನರನ್ನು ಜಾಗೃತಗೊಳಿಸುವ ಕೆಲಸವಾಗಿದೆ ಎಂದರು.

'ಜಗತ್ತನ್ನು ಬಿಡುವಾಗ' ನಾವು ನಗುತ್ತಿರಬೇಕು; ಜಗವೆಲ್ಲ ಅಳುತ್ತಿರಬೇಕು' ಹಾಗೆ ಬದುಕನ್ನು ಸಾರ್ಥಕಪಡಿಸಿಕೊಳ್ಳ ಬೇಕೆಂದರೆ ಒಳ್ಳೆಯ ಕೆಲಸ, ಕಾರ್ಯಗಳನ್ನು ಮಾಡಬೇಕು. ಆಗ ಸಾವೂ ಸಾರ್ಥಕವಾಗುವುದು. ಅಂಥ ಸಾರ್ಥಕ ಬದುಕು ಬದುಕುವುದು ಹೇಗೆ ಎನ್ನುವುದನ್ನು ಪೂಜ್ಯರು ಈ ಕಾರ್ಯಕ್ರಮದ ಮೂಲಕ ತೋರಿಸಿಕೊಡುತ್ತಿದ್ದಾರೆ ಎಂದರು.

ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವ ಮಾದಾರ ಚೆನ್ನಯ್ಯ ಸ್ವಾಮಿಗಳು ಮಾತನಾಡಿ, ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಸಮಾನತೆ, ಸ್ವಾತಂತ್ರ್ಯ, ಮಾನವ ಹಕ್ಕು, ಜಾಗೃತಿ, ಸಂವಿಧಾನ ನೀಡಿದ್ದು ಬಸವಣ್ಣನವರ ಕಾರ್ಯಕ್ಷೇತ್ರವಾಗಿದ್ದ ಕಲ್ಯಾಣದಲ್ಲಿ.

'ಮತ್ತೆ ಕಲ್ಯಾಣ' ಕಾರ್ಯಕ್ರಮ ಒಂದು ಸಮುದಾಯದ, ಜಾತಿಯ, ದೇಶ, ಭಾಷೆಗಳಿಗೆ ಸೀಮಿತವಾದುದಲ್ಲ. ಕಲ್ಯಾಣದ ಹೆಸರನ್ನೇ ಕೇಳದ ಕರ್ನಾಟಕದ ಮೂಲೆ ಮೂಲೆಗೆ, ಮನೆ ಮನೆಗೂ ತಲುಪಿಸಿದ ಕೀರ್ತಿಗೆ ಪಾತ್ರರಾಗಿರುವ ಪಂಡಿತಾರಾಧ್ಯ ಶ್ರೀಗಳು ಬಸವಣ್ಣನವರ ಸಮಾನತೆಯ ಕನಸಿನ ರಥಕ್ಕೆ ಒಂದಿಷ್ಟೂ ಚ್ಯುತಿ ಬರದಂತೆ ಮುನ್ನಡೆಸುತ್ತಿದ್ದಾರೆ ಎಂದರು.

'ಶರಣೆಯರ ಕೊಡುಗೆ' ಕುರಿತಂತೆ ಬೆಂಗಳೂರಿನ ಉಪನ್ಯಾಸಕಿ ಸುಜಾತ ಮೇಲೇಗೌಡ ಮಾತನಾಡಿ ಪಂಡಿತಾರಾಧ್ಯ ಶ್ರೀಗಳು 'ಮತ್ತೆ ಕಲ್ಯಾಣ'ದ ಮೂಲಕ ಬಸವ ಧರ್ಮದ ಬೆಳಕನ್ನು ಹಳ್ಳಿಹಳ್ಳಿಗೆ ತಲುಪಿಸುತ್ತಿದ್ದಾರೆ ಎಂದು ತಿಳಿಸಿದರು.

ಅತಿಥಿಗಳಾಗಿದ್ದ ತಹಶೀಲ್ದಾರ್ ವಿದ್ಯಾ ರಾಥೋಡ್ ಮಾತನಾಡಿ, ರಾಜ್ಯ ಮುಂದೆ ಕಲ್ಯಾಣ ರಾಜ್ಯವಾಗಲು ಅಡಿಪಾಯ ಈ ಮತ್ತೆ ಕಲ್ಯಾಣ. ಮಕ್ಕಳಲ್ಲಿ ವಚನ ಸಂಸ್ಕಾರವನ್ನು ಬೆಳೆಸಿದರೆ ಮುಂದೆ ಈ ನಾಡನ್ನು ಮಕ್ಕಳು ಕಲ್ಯಾಣ ನಾಡನ್ನಾಗಿ ಮಾಡುವುದರಲ್ಲಿ ಅನುಮಾನವಿಲ್ಲ ಎಂದರು.

ಆರಂಭದಲ್ಲಿ ಸಾಣೇಹಳ್ಳಿಯ ಶಿವಸಂಚಾರದ ಕೆ. ಜ್ಯೋತಿ, ಹೆಚ್.ಎಸ್. ನಾಗರಾಜ್ ವಚನ ಗೀತೆಗಳನ್ನು ಹಾಡಿದರು. ಗೌತಮ್ ವಚನ ಪ್ರಾರ್ಥನೆ ಮಾಡಿದರು. ಹೊಸಳ್ಳಿಯ ಲಿಂಗಣ್ಣ ಸ್ವಾಗತಿಸಿದರು. ನಾಗಸಂದ್ರದ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೇಖಾ ಶಶಿಧರ್ ಉಪಸ್ಥಿತರಿದ್ದರು.

# ಶ್ರಮಜೀವಿಗಳ ಕಮ್ಯುನಿಸ್ಟ್ ಪಕ್ಷವನ್ನು ಬೆಳೆಸಬೇಕಿದೆ

## ಸಿಪಿಐ ಮುಖಂಡ ಹೆಚ್.ಕೆ. ಕೊಟ್ರಪ್ಪ ಕರೆ



ಹರಿಹರ, ಆ. 26- ಕಮ್ಯುನಿಸ್ಟ್ ಪಕ್ಷ ಶಿಸ್ತು ಮತ್ತು ಶಿಷ್ಟಾಚಾರದ ಪಕ್ಷವಾಗಿದೆ. ಅಧಿಕಾರ ಇದ್ದರೂ, ಇರದಿದ್ದರೂ ಶ್ರಮಜೀವಿಗಳಿಗಾಗಿ ಹೋರಾಟ ಮತ್ತು ಚಳುವಳಿ ಮಾಡುತ್ತಿರುವುದು ಕಮ್ಯುನಿಸ್ಟ್ ಪಕ್ಷ. ಇಂತಹ ಪಕ್ಷವನ್ನು ಬೆಳೆಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲೆ ಇದೆ ಎಂದು ಸಿಪಿಐ ಮುಖಂಡ ಹೆಚ್.ಕೆ. ಕೊಟ್ರಪ್ಪ ಹೇಳಿದರು.

ನಗರದ ಹಂಸಾಗರ ಕಾಂಪೌಂಡ್ ನಲ್ಲಿರುವ ಕಮ್ಯುನಿಸ್ಟ್ ಪಕ್ಷದ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ತಾಲ್ಲೂಕು ಸಿಪಿಐ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಹರಿಹರದಲ್ಲಿ ಕಮ್ಯುನಿಸ್ಟ್ ಪಕ್ಷ ಈ ಹಿಂದೆ ಬಹಳಷ್ಟು ಹೋರಾಟ ಮಾಡಿ, ಕಾರ್ಮಿಕರ ಮತ್ತು ಜನಸಾಮಾನ್ಯರ ಪ್ರೀತಿ, ವಿಶ್ವಾಸ ಗಳಿಸಿತ್ತು. ಆ ಹಿನ್ನೆಲೆಯಲ್ಲಿ ಮತ್ತೆ ಕಮ್ಯುನಿಸ್ಟ್ ಪಕ್ಷ ಬೆಳೆಸುವ ಕಾರ್ಯ ಆಗಬೇಕಿದೆ. ಅನ್ನ - ಅರಿವೆ - ಆಸರೆಗಳಂತಹ ವಿಷಯಗಳನ್ನು ಬದಿಗಿಟ್ಟು, ಜಾತಿ - ಧರ್ಮದ ವಿಷಯ ಮುಂದಿಟ್ಟು ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿರುವವರ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ ಎಂದವರು ಹೇಳಿದರು.

ಸಭೆಯಲ್ಲಿ ಮರಿಗೌಡ್ರು ಶಿವಕುಮಾರ್ ಸ್ವಾಮಿ, ನರೇಗಾ ರಂಗನಾಥ್, ಹೆಚ್.ಕೆ. ಮಲ್ಲನಗೌಡರು, ರಾಜಪ್ಪ ಹುಲಿಕಟ್ಟಿ, ವೀರಣ್ಣ ಅಗಡಿ, ಉಮೇಶ್ ಇತರರು ಉಪಸ್ಥಿತರಿದ್ದರು.

**ತಾಲ್ಲೂಕು ಪದಾಧಿಕಾರಿಗಳ ಆಯ್ಕೆ** : ಸಿಪಿಐ ತಾಲ್ಲೂಕು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಕಾರ್ಯದರ್ಶಿಯಾಗಿ - ಟಿ. ಹೆಚ್. ನಾಗರಾಜ್, ಸಹ ಕಾರ್ಯದರ್ಶಿ - ಜಬಿ ಉಲ್ಲಾ ಹಾಗೂ ಹನುಮಂತಪ್ಪ ಕೆಎಸ್ಆರ್ ಟಿಸಿ, ಖಜಾಂಚಿ - ಕುಮಾರ್ ನಾಯಕ್ ಹಾಗೂ ಅಬ್ದುಲ್ ರಜಾಕ್, ಪರಮೇಶಪ್ಪ ಬಣಕಾರ್, ಬಸಣ್ಣ ರೆಡ್ಡಿ, ಉಮೇದುಲ್ಲಾ, ಸಿ.ಹೆಚ್. ಚೌಡಪ್ಪ, ನಾಗರಾಜ್ ಹಿತ್ತಲಮನೆ ಅವರು ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

# ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಕ್ರೀಡೆಗಳು ಸಹಕಾರಿ

## ಹರಪನಹಳ್ಳಿ ತಾಲ್ಲೂಕು ಕ್ರೀಡಾಕೂಟದಲ್ಲಿ ಶಾಸಕ ಕರುಣಾಕರ ರೆಡ್ಡಿ



ಹರಪನಹಳ್ಳಿ, ಆ.26 - ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಕ್ರೀಡೆಗಳು ಸಹಕಾರಿಯಾಗಲಿವೆ ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಎಸ್‌ಯುಜೆಎಂ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ, ಎಸ್‌ಯುಜೆಎಂ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ 2022-23ನೇ ಶೈಕ್ಷಣಿಕ ಸಾಲಿನ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಷಾಟ್ ಪುಟ್ ಎಸೆಯುವ ಮೂಲಕ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ ಸಾಕಷ್ಟು ಪದಕಗಳನ್ನು ಪಡೆಯುವ ಮೂಲಕ ಕ್ರೀಡಾ ಪಟುಗಳು ಕ್ರೀಡೆಗಳಲ್ಲಿ ಯಶಸ್ಸು ಕಾಣುತ್ತಿದ್ದಾರೆ. ಈ ನಿಟ್ಟಿನಲ್ಲಿ ಪಠ್ಯದ ಜತೆಗೆ ತಾವೂ ಸಹ ಕ್ರೀಡೆಗಳಲ್ಲಿ ಹೆಚ್ಚಾಗಿ ಭಾಗವಹಿಸಿ. ಕ್ರೀಡೆಯಲ್ಲಿ ಸೋಲು, ಗೆಲುವು ಸಹಜ, ಇದರಿಂದ ಸ್ನೇಹಮಯ ವಾತಾವರಣ ಉಂಟಾಗುತ್ತದೆ. ತಮ್ಮ ನಿಜವಾದ ಪ್ರತಿಭೆ ತೋರಿಸಿ, ಇನ್ನೂ ನಿರ್ಣಾಯಕರಾದ ದೈಹಿಕ ಶಿಕ್ಷಕರು ನ್ಯಾಯವಾಗಿ ತೀರ್ಪು ನೀಡಿ, ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ತಾಲ್ಲೂಕಿನ ಕೀರ್ತಿಯನ್ನು ಹೆಚ್ಚಿಸಿ ಎಂದು ಶುಭ ಹಾರೈಸಿದರು.

ಪುರಸಭೆ ಅಧ್ಯಕ್ಷ ಎಚ್.ಎಂ. ಅಶೋಕ ಮಾತನಾಡಿ, ವಿದ್ಯಾರ್ಥಿಗಳು ಕ್ರೀಡಾ ಮನೋಭಾವನೆ ಬೆಳೆಸಿಕೊಂಡು ಭಾಗವಹಿಸಿ, ಯೋಗ ಸಹ ಆರೋಗ್ಯದಾಯಕ ಕ್ರೀಡೆಯಾಗಿದ್ದು, ಯೋಗವನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಿ, ಪಠ್ಯದ ಜತೆ ಕ್ರೀಡೆಯಲ್ಲಿ ಸಾಧನೆ ಮಾಡಿ ಎಂದು ಹೇಳಿದರು.

ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ, ಹಲುವಾಗಲು, ಹರಪನಹಳ್ಳಿ, ಅರಸೀಕೆರೆ, ಮಾದಿಹಳ್ಳಿ, ಸಾಸ್ವಿಹಳ್ಳಿ, ಸಿಂಗ್ರಿಹಳ್ಳಿ, ಕಂಚಿಕೇರಿ, ಉಚ್ಚಂಗಿದುರ್ಗ, ಲಕ್ಷ್ಮೀಪುರ ಸೇರಿದಂತೆ 17 ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಈ ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ಶಿವಕುಮಾರ್ ಬಿರಾದಾರ ಎಸ್‌ಯುಜೆಎಂ ಕಾಲೇಜು ಪ್ರಾಚಾರ್ಯ ಎಸ್.ಕೆ. ಹಿರೇಮಠ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ. ಸಿದ್ದಲಿಂಗನಗೌಡ, ತಾಲ್ಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಜನಾರ್ದನ ರೆಡ್ಡಿ, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ, ಉಪನ್ಯಾಸಕರ ಸಂಘದ ಅಧ್ಯಕ್ಷ ಬಿ.ಚನ್ನಬಸಪ್ಪ, ಪ್ರಾಚಾರ್ಯರರಾದ ಸಿ.ಬಿ.ವೆಂಕಟೇಶ್, ರಾಮಚಂದ್ರಪ್ಪ, ತೊಪ್ಪಲ ಹಾಲೇಶ್, ಆರ್.ಹೆಚ್. ಕಲ್ಯಾಣದವರ್, ಅರುಣ ಕುಮಾರ್ ಕೆ.ವಿ., ಬಿ. ಬಸವರಾಜ, ಎಂ.ಎಸ್. ಸುಭಾಸ್, ಮಾರೇರ್ ಸೇರಿದಂತೆ ಇತರರು ಇದ್ದರು.

# ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಏಕಗವಾಕ್ಷಿ ಪರವಾನಗಿ

## ಮಲೇಬೆನ್ನೂರು ಸೌಹಾರ್ದ ಸಭೆಯಲ್ಲಿ ಸಿಪಿಐ ಸತೀಶ್ ಕುಮಾರ್



ಮಲೇಬೆನ್ನೂರು, ಆ. 27- ಗಣೇಶ ಪ್ರತಿಷ್ಠಾಪನೆಗೆ ಅಗತ್ಯವಿರುವ ಪರವಾನಗಿಯನ್ನು ಏಕಗವಾಕ್ಷಿ ಅಡಿಯಲ್ಲಿ ಒಂದೇ ಕಡೆ ನೀಡಲಾಗುವುದು ಎಂದು ಹರಿಹರ ಸಿಪಿಐ ಸತೀಶ್ ಕುಮಾರ್ ತಿಳಿಸಿದರು.

ಅವರು ಶುಕ್ರವಾರ ಸಂಜೆ ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಗಣೇಶ ಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗಣೇಶ ಪ್ರತಿಷ್ಠಾಪನೆಗೆ ಅಗತ್ಯವಿರುವ ಸ್ಥಳ, ಪೆಂಡಾಲ್, ವಿದ್ಯುತ್ ಸಂಪರ್ಕ ಸೇರಿದಂತೆ, ಇನ್ನಿತರೆ ಪರವಾನಿಗೆಗಳನ್ನು ನೀಡಲು ಕಂದಾಯ, ಲೋಕೋಪಯೋಗಿ, ಬೆಸ್ಕಾಂ, ಅಗ್ನಿಶಾಮಕ ಮತ್ತು ಪೊಲೀಸ್ ಇಲಾಖೆಗಳ ಅಧಿಕಾರಿಗಳು ಮಲೇಬೆನ್ನೂರಿನ ಪುರಸಭೆ ಕಚೇರಿಯಲ್ಲಿ ಹಾಜರಿದ್ದು, ಪರವಾನಿಗೆ ನೀಡಲಿದ್ದಾರೆ.

ಡಿಜೆಗೆ ಅನುಮತಿ ಇಲ್ಲ. ಮೈಕಿಗೆ ಮಾತ್ರ ಅನುಮತಿ ನೀಡಲಾಗುವುದು. 7 ದಿನಗಳ ನಂತರ ಗಣೇಶ ಇಟ್ಟು ಕೊಳ್ಳುವವರು ಡಿವೈಎಸ್ಪಿ ಅವರಿಂದ ಅನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಸಿಸಿ ಕ್ಯಾಮೇರಾಗಳನ್ನು ಅಳವಡಿಸಿದರೆ ಸೂಕ್ತ ಎಂದು ಸಲಹೆ ನೀಡಿದರು.

ಬೆಸ್ಕಾಂ ಎಇ ಕೊಟ್ರೇಶ್ ಮಾತನಾಡಿ, ವಿದ್ಯುತ್ ತಂತಿ ಹಾದು ಹೋಗಿರುವ ಪ್ರದೇಶದಲ್ಲಿ ಗಣೇಶ ಮೂರ್ತಿ ಸ್ಥಾಪಿಸಲು ಅನುಮತಿ ಇಲ್ಲ. ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ನಮ್ಮ ಇಲಾಖೆಗೆ ಮಾಹಿತಿ ನೀಡಬೇಕು. ವಿದ್ಯುತ್ ಅವಘಡಗಳು ಸಂಭವಿಸದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಮುನ್ನೆಚ್ಚರಿಕೆಯಾಗಿ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ಪುರಸಭೆ ಸದಸ್ಯ ಪಿ.ಆರ್. ರಾಜು, ಹಿರಿಯರಾದ ಕಣ್ಣಾಳ್ ಪರಶುರಾಮಪ್ಪ ಮಾತನಾಡಿದರು.

ಅಗ್ನಿಶಾಮಕ ದಳದ ಅಧಿಕಾರಿ ಬಾಲ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, ಉಪ ತಹಶೀಲ್ದಾರ್ ಆರ್. ರವಿ ಮಾತನಾಡಿದರು.

ಪಿಎಸ್ಐ ರವಿಕುಮಾರ್ ಮಾತನಾಡಿ, ಮಲೇಬೆನ್ನೂರು ಹೋಬಳಿಯಲ್ಲಿ ಸುಮಾರು 150 ಕಡೆಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡುವ ಬಗ್ಗೆ ಈಗಾಗಲೇ ಮಾಹಿತಿ ಇದೆ. ಅಗತ್ಯ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗುವುದೆಂದರು.

ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಎ.ಕೆ. ಲೋಕೇಶ್, ಟಿ.ಹನುಮಂತಪ್ಪ, ಭೋವಿ ಕುಮಾರ್, ಮುಖಂಡರಾದ ಕೆ.ಪಿ.ಗಂಗಾಧರ್, ಜಿಗಳೇರ ಹಾಲೇಶಪ್ಪ, ಬಿ. ಸುರೇಶ್, ಓ.ಜಿ. ಕುಮಾರ್, ಪಾಳೇಗಾರ ನಾಗರಾಜ್, ಕಣ್ಣಾಳ್ ಧರ್ಮಣ್ಣ, ಜಿಗಳಿಯ ಕೆ.ಆರ್. ರಂಗಪ್ಪ, ಹೆಚ್. ಟಿ. ರಂಗನಾಥ್, ಕುಂಬಳೂರು ವಾಸು, ಯರೇಚಿಕ್ಕನಹಳ್ಳಿ ಚಂದ್ರಶೇಖರ್, ಬಿ. ಚಂದ್ರಪ್ಪ ಮತ್ತಿತರರಿದ್ದರು.

# ಪರಿಸರ ಸ್ನೇಹಿ ಗಣೇಶ ಹಬ್ಬ ಮಾಲಿನ್ಯ ನಿಯಂತ್ರಣ ಮಂಡಳಿ ಕರೆ

ದಾವಣಗೆರೆ, ಆ. 26- ಪರಿಸರ ಸಂರಕ್ಷಣೆಗಾಗಿ ಪರಿಸರ ಸ್ನೇಹಿಯಾಗಿ ಗಣೇಶ ಹಬ್ಬ ಆಚರಿಸಲು ಅನುಸರಣಾ ಮಾರ್ಗ ಸೂಚಿಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಿಡುಗಡೆ ಮಾಡಿದೆ.

ಮಣ್ಣಿನಿಂದ ಮಾಡಿದ ಚಿಕ್ಕ ಚಿಕ್ಕ ಗಣೇಶ ಮೂರ್ತಿಗಳನ್ನು ತಯಾರಿಸಿ, ಮನೆಯ ಅಂಗಳದಲ್ಲಿ ವಿಸರ್ಜಿಸಿ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಸಹಕರಿಸಬೇಕು. ಈ ಬಾರಿ ಗಣೇಶ ಹಬ್ಬವನ್ನು ಸರಳವಾಗಿ, ಭಕ್ತಿಪೂರ್ವಕವಾಗಿ, ದೇವಸ್ಥಾನ ಅಥವಾ ಮನೆಯೊಳಗೆ ಆಚರಿಸಬೇಕು. ಸಾರ್ವಜನಿಕರು ಪರಿಸರ ಹಾಗೂ ಆರೋಗ್ಯ ಸ್ನೇಹಿ ಗಣೇಶಮೂರ್ತಿಗಳೊಂದಿಗೆ ಹಬ್ಬ ಆಚರಿಸಲು ಸೂಚನೆ ನೀಡಲಾಗಿದೆ.

ರಾಸಾಯನಿಕ ಬಣ್ಣ ಲೇಪಿತ ಗಣೇಶ ಮೂರ್ತಿಗಳನ್ನು ಖರೀದಿಸದೇ, ಮನೆಗಳಲ್ಲಿ ಮಣ್ಣಿನ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅಮೂಲ್ಯ ಜಲ ಮೂಲಗಳನ್ನು ಮಾಲಿನ್ಯದಿಂದ ರಕ್ಷಣೆ ಮಾಡಬೇಕಾಗಿದೆ. ಸ್ಥಳೀಯ ಸಂಸ್ಥೆಗಳು ನಿಗದಿಪಡಿಸಿದ ಮೊಬೈಲ್ ಟ್ಯಾಂಕ್ ಗಳಲ್ಲಿ ವಿಸರ್ಜಿಸಬೇಕು.

ನ್ಯಾಯಾಲಯದ ತೀರ್ಪಿನಂತೆ ರಾತ್ರಿ 10 ರಿಂದ ಬೆಳಿಗ್ಗೆ 6 ರ ತನಕ ಯಾವುದೇ ರೀತಿಯಿಂದ ಧ್ವನಿ ವರ್ಧಕಗಳನ್ನು ಅಥವಾ ಧ್ವನಿಯನ್ನುಂಟು ಮಾಡುವ ಡೋಲು, ತಮಟೆ, ಜಾಗಟೆ ಇತ್ಯಾದಿಗಳನ್ನು ತುರ್ತು ಸಂದರ್ಭದಲ್ಲಿ ಹೊರತುಪಡಿಸಿ ಉಳಿದ ಸಂದರ್ಭಗಳಲ್ಲಿ ನಿಷೇಧಿಸಲಾಗಿದೆ.

ಪಟಾಕಿ ಸಿಡಿಸಬೇಡಿ. ಪಟಾಕಿ ಹೊಗೆ ಮಾಲಿನ್ಯಕಾರಕ. ಅಲ್ಲದೆ ರಸ್ತೆ ತುಂಬಾ ಕಸಮಯವಾಗುತ್ತದೆ. ಪಟಾಕಿ ಶಬ್ಧ ಕಿವಿಗೆ ಹಾನಿಕಾರಕ. ಚರಂಡಿಗಳಲ್ಲಿ ಹೂವಿನ ಹಾರ, ತಟ್ಟೆ, ಲೋಟ, ಎಲೆ ಎಸೆಯದಂತೆ ನಿರ್ಬಂಧಿಸಲಾಗಿದೆ. ಮನೆಯ ಬಳಿ ಬರುವ ಕಸದ ಗಾಡಿಗಳಿಗೆ ಕೊಡಬೇಕು ಎಂದು ಪರಿಸರ ಅಧಿಕಾರಿ ಸಿ.ಎನ್. ಮಂಜಪ್ಪ ಮನವಿ ಮಾಡಿದ್ದಾರೆ.

ಮಣ್ಣಿನ ಗಣೇಶ ಮೂರ್ತಿಗಳಿಗೆ ಎನ್. ಶಿವಕುಮಾರ್ (9844999296), ಚಂದ್ರಶೇಖರ್ (9945611563), ಅನುಪ್ ಕುಮಾರ್(7204042729),ಆನಂದಕುಮಾರ್(9880477211), ಶಿವಕುಮಾರ್ ಕುಂಬಾರ್ (9945721299), ಈ. ತಿಪ್ಪೇಸ್ವಾಮಿ (9844145843) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

# ಮಾರುತಿ ಸುಜುಕಿ 'ನೆಕ್ಸಾ' ಉದ್ಘಾಟನೆ



ದಾವಣಗೆರೆ, ಆ. 26- ಆವರಗೆರೆಯಲ್ಲಿ ಶೃತಿ ಮೋಟಾರ್ಸ್ ನ ಮಾರುತಿ ಸುಜುಕಿಯ 'NEXA' ನೂತನ ಶೋ ರೂಂ ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಶೋ ರೂಂ ಮಾಲೀಕ ಡಿ.ಪಿ.ಮೋಹನ್ ಮತ್ತು ಮುಖ್ಯ ಅತಿಥಿಗಳು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

# ಪ್ರೇರಣಾ ಎಂ. ಕುಲಕರ್ಣಿಗೆ ಪುರಸ್ಕಾರ



ದಾವಣಗೆರೆ, ಆ. 26- ನಗರದ ಎಸ್‌ಎಜೆಬಿ ಕಾಲೇಜಿನ ವಾಣಿಜ್ಯ ವಿಭಾಗದ ದ್ವಿತೀಯ ಪಿಯುಸಿ ಪರೀಕ್ಷೆಯ ಲೆಕ್ಕಶಾಸ್ತ್ರದಲ್ಲಿ 100 ಕ್ಕೆ 100 ಅಂಕ ಗಳಿಸಿದ ಪ್ರೇರಣಾ ಎಂ. ಕುಲಕರ್ಣಿ ಅವರಿಗೆ ಕಾಲೇಜಿನ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಯಿತು.

# ತಾಳದ ಬಸವರಾಜ ನಿಧನ



ದಾವಣಗೆರೆ ಆರ್.ಟಿ.ಓ ಆಫೀಸ್ ಹಿಂಭಾಗ ಯರಗುಂಟೆ ರಸ್ತೆ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್ ವಾಸಿ **ಶ್ರೀ ತಾಳದ ಬಸವರಾಜ** (68) ಅವರು ದಿನಾಂಕ 26.08.2022 ರ ಶುಕ್ರವಾರ ರಾತ್ರಿ 11.30 ಕ್ಕೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.08.2022 ರ ಶನಿವಾರ ಮಧ್ಯಾಹ್ನ 3 ಗಂಟೆಗೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

**- ದುಃಖತಪ್ತ ಕುಟುಂಬ ವರ್ಗ**

# ಭಾವಪೂರ್ಣ ಶ್ರದ್ಧಾಂಜಲಿ



**ದಿನಾಂಕ 26 ರಂದು ನಿಧನರಾದ**

**ಶ್ರೀ ತಾಳದ ಬಸವರಾಜ**

**ಅವರಿಗೆ**

**ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.**

**ದೇವಾಂಗ ಪೇಟೆಯ ಗೆಳೆಯರು**

**ಹಾಗೂ ಬಂಧು - ಮಿತ್ರರು**

# ಎಂಟನೇ ವರ್ಷದ ಪುಣ್ಯಸ್ಮರಣೆ



**ಜನನ:**
**28.06.1945**

**ಲಿಂಗೈಕ್ಯ:**
**27.08.2014**

**ದಿ|| ಶ್ರೀ ಟಿ. ಪಂಚಾಕ್ಷರಪ್ಪ ಮರಿಸ್ವಾಮಿ**

**ಶೈಲ ಹೊಸೈರೀಸ್, ಮಂಡಿಪೇಟೆ, ದಾವಣಗೆರೆ.**


ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ,

**ಶ್ರೀಮತಿ ಟಿ.ಪಿ. ಸೌಭಾಗ್ಯಮ್ಮ ಪಂಚಾಕ್ಷರಪ್ಪ ಮತ್ತು ಮಕ್ಕಳು.ಸಹೋದರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಸ್ವಾಮಿ ವಂಶಸ್ಥರು ಹಾಗೂ ಬಂಧು-ಮಿತ್ರರು.**

# ಕೊಡುಗೆಗಳಿಂದ ರಾಜ್ಯಗಳು ದಿವಾಳಿಯತ್ತ

**(1ನೇ ಪುಟದಿಂದ)** ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸಾಧ್ಯವಾಗದ ಪರಿಸ್ಥಿತಿ ಬರುತ್ತದೆ. ರಾಜ್ಯಗಳು ದಿವಾಳಿ ಕಡೆಗೆ ಸಾಗುವುದು ಅನಿವಾರ್ಯವಾಗುತ್ತದೆ. ಉಚಿತ ಕೊಡುಗೆಗಳನ್ನು ತೆರಿಗೆದಾರರ ಹಣದಿಂದ ನೀಡುವ ಮೂಲಕ ಪಕ್ಷಗಳ ಜನಪ್ರಿಯತೆ ಹೆಚ್ಚಿಸಲು ಹಾಗೂ ಚುನಾವಣಾ ಅವಕಾಶ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ ಎಂಬುದನ್ನೂ ನೆನಪಿಟ್ಟುಕೊಳ್ಳಬೇಕು ಎಂದು ನ್ಯಾಯಾಲಯ ಹೇಳಿದೆ.

# ಶ್ರೀಮತಿ ಗೌಳಿ ಲೀಲಾ ನಿಧನ



ದಾವಣಗೆರೆ ಮಹಾರಾಜಪೇಟೆ ವಾಸಿ ಹೋಂ ಗಾರ್ಡ್ ಗೌಳಿ ಹುಚ್ಚಪ್ಪ ಇವರ ಧರ್ಮಪತ್ನಿ ಲೀಲಾ (53) ಅವರು, ದಿನಾಂಕ 26.8.2022 ರ ಶುಕ್ರವಾರ ತಡರಾತ್ರಿ 12.30 ಕ್ಕೆ ನಿಧನರಾದರು. ಪತಿ, ಇಬ್ಬರು ಗಂಡು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.8.2022 ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

# ಬಳ್ಳಾರಿ, ಚಿತ್ರದುರ್ಗದಲ್ಲಿ ಗಣಿಗಾರಿಕೆ ಮಿತಿ ಹೆಚ್ಚಳ

**(1ನೇ ಪುಟದಿಂದ)** ಹೆಚ್ಚಿಸಲಾಗಿದೆ. ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠ ಈ ಬಗ್ಗೆ ಆದೇಶ ಹೊರಡಿಸಿದೆ. ಇತರೆ ರಾಜ್ಯಗಳ ಮಾದರಿಯಲ್ಲೇ ಕರ್ನಾಟಕದಲ್ಲೂ ಕಬ್ಬಿಣದ ಅದಿರು ಗಣಿಗಾರಿಕೆ ಮೇಲಿನ ಮಿತಿ ಹೆಚ್ಚಿಸಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು.

ಮೂರು ಜಿಲ್ಲೆಗಳಲ್ಲಿ ಗಣಿಗಾರಿಕೆ ನಿರ್ಬಂಧವನ್ನು ತೆಗೆದು ಹಾಕುವಂತೆ ಸುಪ್ರೀಂ ಕೋರ್ಟ್‌ನಿಂದ ನೇಮಿಸಲಾದ ಕೇಂದ್ರ ಸಶಕ್ತ ಸಮಿತಿ ಶಿಫಾರಸ್ಸು ಮಾಡಿತ್ತು. ಆದರೆ, ನಿರ್ಬಂಧವನ್ನು ತೆಗೆದು ಹಾಕದ ಸುಪ್ರೀಂ ಕೋರ್ಟ್, ಗಣಿಗಾರಿಕೆ ಮಿತಿಯನ್ನಷ್ಟೇ ಹೆಚ್ಚಿಸಿದೆ.

# ನನಗೆ ನೇತೃತ್ವ ಕೊಡಿ

**(1ನೇ ಪುಟದಿಂದ)** ಭೇಟಿಯಾದ ಸಂದರ್ಭದಲ್ಲಿ ಯಡಿಯೂರಪ್ಪ, ಕರ್ನಾಟಕದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ಹೊಣೆಗಾರಿಕೆ ನನ್ನದು ಎಂದಿದ್ದಾರೆ.

ಆದರೆ, ನಾನು ನೀಡುವ ಕೆಲವು ಸಲಹೆಗಳನ್ನು ಅನುಷ್ಠಾನಗೊಳಿಸುವಂತೆ ಸಲಹೆ ಮಾಡಿದ್ದಾರೆ ಎನ್ನಲಾಗಿದೆ.

ಗಣೇಶ ಹಬ್ಬ ಮುಗಿದ ತಕ್ಷಣವೇ ರಾಜ್ಯಾದ್ಯಂತ ತಾವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಪ್ರತ್ಯೇಕವಾಗಿ ಪ್ರವಾಸ ಕೈಗೊಂಡು ಕಾರ್ಯಕರ್ತರನ್ನು ಸಂಘಟಿಸುವುದಲ್ಲದೆ, ಪ್ರತಿ ಪಕ್ಷ ಕಾಂಗ್ರೆಸ್‌ನ ಆರೋಪಗಳಿಗೆ ಸಾರ್ವಜನಿಕವಾಗಿ ಉತ್ತರ ನೀಡುತ್ತೇವೆ ಎಂದಿದ್ದಾರೆ.

ಬಿಜೆಪಿ ಸರ್ಕಾರಕ್ಕೆ ಮೂರು ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ರಾಜ್ಯದ ಏಳು ಕಡೆ ಜನೋತ್ಸವ ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳ ಲಿದ್ದು, ಈ ರೀತಿಯ ಪ್ರತಿ ಕಾರ್ಯಕ್ರಮದಲ್ಲಿ ವರಿಷ್ಠರೊಬ್ಬರು ಭಾಗವಹಿಸುವಂತೆ ನಡ್ಡಾ ಅವರಿಗೆ ಮನವಿ ಮಾಡಿದ್ದಾರೆ.

# ಸೆಪ್ಟೆಂಬರ್‌ನಿಂದ 'ರೈತ ಶಕ್ತಿ'

**(1ನೇ ಪುಟದಿಂದ)** ನೋಂದಣಿ ಮಾಡಿಕೊಂಡ ರಾಜ್ಯದ ಎಲ್ಲಾ ರೈತರು ಇದರ ಫಲಾನುಭವಿಗಳಾಗಿರುತ್ತಾರೆ.

ಹೊಸ ಯೋಜನೆಗೆ ಯಾರು ಅರ್ಜಿ ಸಲ್ಲಿಸಬೇಕಾಗಿಲ್ಲ. ಈಗಾಗಲೇ ಸಲ್ಲಿಸಿರುವ ದಾಖಲೆಗಳನ್ನು ಆಧರಿಸಿ, ನಿಮ್ಮ ಖಾತೆಗೆ ಡೀಸೆಲ್ ಸಹಾಯಧನ ತಲುಪುತ್ತದೆ ಎಂದು ತಿಳಿಸಿದ್ದಾರೆ.

# ದಿಬ್ಬದಹಳ್ಳಿ ಗ್ರಾಮದ ಹಾಲಮ್ಮ ನಿಧನ



ಹರಿಹರ ತಾಲ್ಲೂಕು ದಿಬ್ಬದಹಳ್ಳಿ ಗ್ರಾಮದ ವಾಸಿ
ದಿ.ಕರಿಬಸಪ್ಪನವರ ಧರ್ಮಪತ್ನಿ ಹಾಗೂ ಮಲೇಬೆನ್ನೂರಿನ ಲಯನ್ಸ್ ಕ್ಲಬ್
ಮಾಜಿ ಅಧ್ಯಕ್ಷರಾದ ಓ.ಜಿ. ರುದ್ರಗೌಡ ಅವರ ಸಹೋದರಿಯಾದ

**ಶ್ರೀಮತಿ ಹಾಲಮ್ಮ (82 ವರ್ಷ)**

ಇವರು ದಿನಾಂಕ 26.8.2022ರ ಶುಕ್ರವಾರ ರಾತ್ರಿ 9.30ಕ್ಕೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.8.2022ರ ಶನಿವಾರ ಮಧ್ಯಾಹ್ನ 2 ಗಂಟೆಗೆ ದಿಬ್ಬದಹಳ್ಳಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

# ಗುಲಾಂ ನಬಿ ಆಜಾದ್ ಕಾಂಗ್ರೆಸ್‌ಗೆ ರಾಜೀನಾಮೆ

**(1ನೇ ಪುಟದಿಂದ)** ಬರಲಾಗಿದೆ. ಕಾಂಗ್ರೆಸ್ ಈಗ ಕೇವಲ ಎರಡು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದೆ ಮತ್ತು ಎರಡು ಇತರೆ ರಾಜ್ಯಗಳಲ್ಲಿ ಸಣ್ಣ ಮೈತ್ರಿ ಪಕ್ಷವಾಗಿ ಆಡಳಿತ ನಡೆಸುತ್ತಿದೆ ಎಂದವರು ಹೇಳಿದ್ದಾರೆ.

# ಆಡಳಿತ ವಿಕೇಂದ್ರೀಕರಣದಿಂದ ಗ್ರಾಮಗಳ ಅಭಿವೃದ್ಧಿ

**(1ನೇ ಪುಟದಿಂದ)** ರಸಮಂಜರಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಶಾಸಕ ಎಸ್.ವಿ.ರಾಮಚಂದ್ರ ಉದ್ಘಾಟಿಸಿದರು.

ಗ್ರಾ.ಪಂ ಅಧ್ಯಕ್ಷೆ ಗಾಯತ್ರಿ ಹನುಮಂತಪ್ಪ, ಉಪಾಧ್ಯಕ್ಷೆ ಮಂಜಮ್ಮ ಪ್ರಕಾಶ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ತಹಶೀಲ್ದಾರ್ ಜಿ.ಸಂತೋಷ್ ಕುಮಾರ್, ಡಿ.ಎಚ್.ಓ ಡಾ.ನಾಗರಾಜ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಾಸಂತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ರೇಷ್ಮ ಕೌಸರ್, ತಾ.ಪಂ.ಇಓ ಚಂದ್ರಶೇಖರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ್ವರಪ್ಪ, ಬಿಇಓ ಉಮಾದೇವಿ, ಬಿಸಿಎಂ ಇಲಾಖೆ ಆಸ್ಮಾಬಾನು ಸೇರಿದಂತೆ ಜಿಲ್ಲಾ, ತಾಲ್ಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ವಿಜ್ಞಾನದ ಫಲ ಗ್ರಾಮಗಳಿಗೆ ತಲುಪಿದಾಗ ಅಭಿವೃದ್ಧಿ

## ಕೆ.ಎ.ಎ.ಎಸ್. ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ದಾವಣಗೆರೆ ವಿ.ವಿ. ಕುಲಪತಿ ಡಾ.ಬಿ.ಡಿ. ಕುಂಬಾರ್



ದಾವಣಗೆರೆ, ಆ. 26 - ವಿಜ್ಞಾನ ವಲಯದಲ್ಲಿ ಸಂಶೋಧನೆಗೆ ಒತ್ತು ಕೊಟ್ಟು, ಅದರ ಫಲವನ್ನು ಗ್ರಾಮೀಣ ಭಾರತಕ್ಕೆ ತಲುಪಿಸಿದಾಗ ಮಾತ್ರ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಾಧ್ಯ ಎಂದು ದಾವಣಗೆರೆ ವಿ.ವಿ. ಕುಲಪತಿ ಡಾ. ಬಿ.ಡಿ. ಕುಂಬಾರ್ ತಿಳಿಸಿದ್ದಾರೆ.

ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ (ಕೆ.ಎ.ಎ.ಎಸ್.) ಘಟಕದ ಉದ್ಘಾಟನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲಿ ಸಾಕಷ್ಟು ಯುವಕರು ಹಾಗೂ ವಿಜ್ಞಾನಿಗಳಿದ್ದರೂ ಸಂಶೋಧನಾ ವಲಯದಲ್ಲಿ ನಿರೀಕ್ಷಿತ ಪ್ರಗತಿಯಾಗಿಲ್ಲ. ಒಬ್ಬಿಬ್ಬರು ಮಾತ್ರ ವಿಜ್ಞಾನ ವಲಯದಲ್ಲಿ ನೊಬೆಲ್ ಪಡೆದಿದ್ದಾರೆ ಎಂದವರು ವಿಷಾದಿಸಿದರು.

ಯುವಕರು ಹಾಗೂ ವಿಜ್ಞಾನಿಗಳು ಹೆಚ್ಚಾಗಿರುವ ಭಾರತದಲ್ಲಿ, ಸಂಶೋಧನೆಗೆ ಹೆಚ್ಚು ಆದ್ಯತೆ ನೀಡಬೇಕಿದೆ. ವಿಜ್ಞಾನದ ಸಾಧನೆಯ ಫಲಗಳನ್ನು ಗ್ರಾಮೀಣ ಭಾರತಕ್ಕೆ ತಲುಪಿಸಬೇಕಿದೆ. ಆಗ ಮಾತ್ರ ಭಾರತ ಅಭಿವೃದ್ಧಿ ಹೊಂದಿದ ದೇಶವಾಗುತ್ತದೆ ಎಂದವರು ಹೇಳಿದರು.

ಕೊರೊನಾ ಸಮಯದಲ್ಲಿ ನಮ್ಮ ವೈದ್ಯರು ಹಾಗೂ ಔಷಧ ವಲಯದವರು ದಕ್ಷವಾಗಿ ಕಾರ್ಯ ನಿರ್ವಹಿಸಿದ್ದರು. ಅವರು ತೋರಿದ ಸಾಮರ್ಥ್ಯ ನಮ್ಮೆಲ್ಲರಿಗೂ ಸ್ಫೂರ್ತಿಯಾಗಬೇಕಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕೆ.ಎ.ಎ.ಎಸ್. ಅಧ್ಯಕ್ಷ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ. ಕೆ. ಸಿದ್ದಪ್ಪ, ಕೆ.ಎ.ಎ.ಎಸ್. ಅನ್ನು ರಾಜ್ಯಾದ್ಯಂತ ಹರಡುವ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಲ್ಲಿ ವಿಜ್ಞಾನವನ್ನು ಪಸರಿಸುವ ಉದ್ದೇಶವಿದೆ. ಈ ಹಿನ್ನೆಲೆಯಲ್ಲಿ ದಾವಣಗೆರೆಯಲ್ಲಿ ಕೆ.ಎ.ಎ.ಎಸ್. ಕೇಂದ್ರ ಸ್ಥಾಪಿಸಲಾಗುತ್ತಿದೆ ಎಂದರು.

**ಅಮೆರಿಕ ಹಾಗೂ ರಷ್ಯಾ ರೀತಿಯ ದೇಶಗಳು ಬೇರೆ ದೇಶಗಳ ತಂತ್ರಜ್ಞಾನಗಳನ್ನು ಕದ್ದು ಅಣು ಸಾಮರ್ಥ್ಯ ಬೆಳೆಸಿಕೊಂಡಿವೆ. ಆದರೆ, ಭಾರತ ಸ್ವಂತ ಶಕ್ತಿಯ ಮೇಲೆ ಅಣು ವಲಯದಲ್ಲಿ ಸಾಧನೆ ಮಾಡಿದೆ. ಅಷ್ಟೇ ಅಲ್ಲದೇ, ಅಣು ವಲಯದಲ್ಲಿ ಭಾರತ ಗಳಿಸಿದ ಜ್ಞಾನ ಅಮೆರಿಕದಂತಹ ದೇಶಗಳು ಮರು ಸಂಶೋಧನೆಯಲ್ಲಿ ತೊಡಗುವಂತೆ ಮಾಡಿದೆ.**

**- ಪ್ರೊ. ಕೆ. ಸಿದ್ದಪ್ಪ, ಕೆಎಎಎಸ್ ಅಧ್ಯಕ್ಷ**

ಚಿತ್ರದುರ್ಗವು ವಿಜ್ಞಾನ ಕೇಂದ್ರವಾಗಿ ಬೆಳೆಯುತ್ತಿದೆ. ಅಲ್ಲಿ ಹಲವಾರು ರಾಷ್ಟ್ರ ಮಟ್ಟದ ಸಂಶೋಧನಾ ಕೇಂದ್ರಗಳು ಸ್ಥಾಪನೆಯಾಗುತ್ತಿವೆ. ಅವುಗಳ ಜೊತೆ ದಾವಣಗೆರೆ ವಿಶ್ವವಿದ್ಯಾನಿಲಯವೂ ಸಹಭಾಗಿತ್ವ ಹೊಂದುವಂತಾಗಬೇಕು ಎಂದವರು ಅಭಿಪ್ರಾಯ ಪಟ್ಟರು.

ವಿಜ್ಞಾನ ವಲಯಕ್ಕೆ ಒತ್ತು ನೀಡುವ ಮೂಲಕ ಭಾರತ ಮುಂದೊಂದು ದಿನ ವಿಶ್ವದ ದೊಡ್ಡಣ್ಣ ಆಗುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ವಿಜ್ಞಾನ ವಲಯದಲ್ಲಿರುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಿದೆ ಎಂದು ಹೇಳಿದರು.

ವೇದಿಕೆಯ ಮೇಲೆ ಬಿಐಇಟಿ ಪ್ರಾಂಶುಪಾಲ ಪ್ರೊ. ಹೆಚ್.ಬಿ. ಅರವಿಂದ, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಬೆಂಗಳೂರು ಐಐಎಸ್‌ಸಿ ಹಿರಿಯ ಉಪಾಧ್ಯಾಯ ಪ್ರೊ. ರವಿ ನಂಜುಂಡಯ್ಯ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಮಾಜಿ ನಿರ್ದೇಶಕ ಡಾ. ಕೆ.ಪಿ. ಪುಟ್ಟರಾಯ, ಹಿರಿಯ ವೈದ್ಯರಾದ ಡಾ. ಮಂಜುನಾಥ ಆಲೂರು ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ದಿವ್ಯ ಹಿರೇಮಠ್ ಪ್ರಾರ್ಥಿಸಿ ದರು. ಕೆ.ಎ.ಎ.ಎಸ್. ಕಾರ್ಯದರ್ಶಿ ಪ್ರೊ. ಬಿ.ಸಿ. ಪ್ರಭಾಕರ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ. ಟಿ.ಕೆ. ಕೃಷ್ಣಕುಮಾರ್ ನಿರೂಪಿಸಿದರು.

# ಜಗಳೂರು; ಯಾದವ ಸಮಾಜದಿಂದ ಶ್ರೀ ಕೃಷ್ಣ ಜಯಂತಿ ಅದ್ದೂರಿ ಮೆರವಣಿಗೆ



ಜಗಳೂರು, ಆ.26- ಯಾದವ ಸಮಾಜದಿಂದ ಹಮ್ಮಿಕೊಂಡಿದ್ದ ಶ್ರೀ ಕೃಷ್ಣ ಜಯಂತ್ಯೋತ್ಸವ ಆಚರಣೆಯಲ್ಲಿ ಕಲಾ ತಂಡಗಳು ಜನಸ್ತೋಮ ದೊಂದಿಗೆ ಅದ್ದೂರಿ ಮೆರವಣಿಗೆ ಜರುಗಿತು.

ಪಟ್ಟಣದ ಮಾರಮ್ಮ ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಶ್ರೀ ಕೃಷ್ಣನ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಯಾದವ ಸಮಾಜಕ್ಕೆ ಅಲೆಮಾರಿ ಸಮುದಾಯದ ಮೀಸಲಾತಿಯಡಿ ವಸತಿ ರಹಿತರಿಗೆ 1747 ವಸತಿ ಕಲ್ಪಿಸಿರುವೆ. ಸಮುದಾಯದ ಸರ್ವತೋಮುಖ ಅಭಿವೃದ್ದಿಗೆ ಸದಾ ಸಿದ್ದ. ಯಾದವ ಸಮಾಜದ ಬಂಧುಗಳ ಆಶೀರ್ವಾದ ಸದಾ ನನ್ನ ಮೇಲಿರಲಿ ಎಂದು ತಿಳಿಸಿದರು.

ಹಾಲಿ ಶಾಸಕರ ಹಾಗೂ ಮಾಜಿ ಶಾಸಕರ ಅಭಿಮಾನಿಗಳು ಸ್ಪರ್ಧೆಗೆ ಬಿದ್ದವರಂತೆ ಹೆಗಲ ಮೇಲೆ ಹೊತ್ತು ಕುಣಿದು ಸಂಭ್ರಮಿಸಿದರು.

ಮೆರವಣಿಗೆಯಲ್ಲಿ ರಸ್ತೆ ಉದ್ದಕ್ಕೂ ಮಾಜಿ ಶಾಸಕ ಎಚ್.ಪಿ.ರಾಜೇಶ್, ಕೆಪಿಸಿಸಿ ಎಸ್.ಟಿ ಘಟಕದ ಕೆ.ಪಿ. ಪಾಲಯ್ಯ, ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಅವರು ಡೊಳ್ಳಿಗೆ ಹೆಜ್ಜೆ ಹಾಕಿದರು. ಅಭಿಮಾನಿಗಳು ಹೆಗಲ ಮೇಲೆ ಹೊತ್ತು ನಂತರ ಮಹಾತ್ಮ ಗಾಂಧಿ ವೃತ್ತದಲ್ಲಿ ಜೀಪ್ ನಲ್ಲಿ ಮೆರವಣಿಗೆ ನಡೆಸಿ ಹೂವಿನ ಹಾರ, ಪುಷ್ಪಾರ್ಚನೆಯೊಂದಿಗೆ ಮೇಲ್ಭಾಗದಲ್ಲಿ ಕಟ್ಟಿದ್ದ ಮೊಸರಿನ ಮಡಿಕೆಯನ್ನು ಒಡೆದು ಸಂಭ್ರಮಿಸಿದರು.

### ಸ್ಪರ್ಧೆಗೆ ಬಿದ್ದವರಂತೆ ಹಾಲಿ, ಮಾಜಿ ಶಾಸಕರನ್ನು ಹೊತ್ತು ಕುಣಿದ ಅಭಿಮಾನಿಗಳು

ಕೆಪಿಸಿಸಿ ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್, ಮುಖಂಡರಾದ ಪಿ.ಎಸ್.ಸುರೇಶ್ ಗೌಡ, ಜಿ.ಪಂ. ಮಾಜಿ ಸದಸ್ಯ ಎಸ್ ಕೆ.ಮಂಜುನಾಥ್, ಬಿಸ್ತುವಳ್ಳಿ ಬಾಬು, ಯಾದವ ಸಮಾಜದ ಮುಖಂಡರಾದ ಶಶಿಧರ್, ಹಾಲಸ್ವಾಮಿ, ಇಂದ್ರೇಶ್, ತಿಪ್ಪೇಸ್ವಾಮಿ, ಬಾಲರಾಜ್, ತಿಪ್ಪೇಸ್ವಾಮಿಗೌಡ, ಚಿತ್ತಪ್ಪ, ಕಾಟಪ್ಪ, ಕೃಷ್ಣಪ್ಪ, ರಂಗಸ್ವಾಮಿ ಸೇರಿದಂತೆ ವಿವಿಧ ಗೊಲ್ಲರ ಹಟ್ಟಿ ಗ್ರಾಮಗಳ ಮುಖಂಡರು, ಯುವಕರು ಭಾಗವಹಿಸಿದ್ದರು.

# ಹೊನ್ನಾಳಿ ಹಿರೇಕಲ್ಮಠದ ರಥೋತ್ಸವ



ಹೊನ್ನಾಳಿ, ಆ. 26 - ಸನಾತನ ಹಿಂದೂ ಸಂಸ್ಕೃತಿಯಲ್ಲಿ ಹಬ್ಬ - ಹರಿದಿನ, ಜಾತ್ರಾ- ಮಹೋತ್ಸವಗಳು ಭಾವೈಕ್ಯತೆಯ ಸಂಕೇತಗಳಾಗಿವೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಹಿರೇಕಲ್ಮಠದ ರಥೋತ್ಸದಲ್ಲಿ ಪಾಲ್ಗೊಂಡು ರಥವನ್ನು ಎಳೆದು ಅವರು ಮಾತನಾಡಿದರು.

ಅನಾದಿ ಕಾಲದಿಂದಲೂ ನಮ್ಮ ಸನಾತನ ಸಂಸ್ಕೃತಿಯಲ್ಲಿ ಜಾತ್ರಾ ಮಹೋತ್ಸವಗಳು, ಹಬ್ಬ-ಹರಿದಿನಗಳು ನಮ್ಮ ಹಿರಿಯರು ನಮಗಾಗಿ ಬಿಟ್ಟುಹೋದ ಮಾರ್ಗದರ್ಶಿಗಳು ಎಂದರು.

ಅಪಾರ ಭಕ್ತ ವೃಂದವನ್ನು ಹೊಂದಿದ ಹಿರೇ ಕಲ್ಮಠದ ಪರಂಪರೆಯು ಅನಾದಿ ಕಾಲದಿಂದಲೂ ಶ್ರದ್ಧಾ - ಭಕ್ತಿ ಕೇಂದ್ರವಾಗಿದೆ. ಧಾರ್ಮಿಕ ಕಾರ್ಯದ ಜೊತೆಗೆ ಶಿಕ್ಷಣ ದಾಸೋಹದಂತಹ ಮಹತ್ಕಾರ್ಯ ವನ್ನು ಮಹಾಮಠ ಮಾಡುತ್ತಿದೆ ಎಂದರು.

ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ವಿವಿಧ ಕೆಲಸ ಕಾರ್ಯಗಳನ್ನು ಮಾಡುತ್ತಿರುವ ಭಕ್ತ ವೃಂದಕ್ಕೆ ಅಭಿನಂದನೆ ಸಲ್ಲಿಸಿದ ಶಾಸಕರು, ಪ್ರತಿಯೊಬ್ಬರೂ ನೇತ್ರದಾನ ಮಾಡಲು ಮುಂದಾಗಬೇಕು, ನಮಗೆಲ್ಲಾ ಪುನೀತ್ ರಾಜ್ ಕುಮಾರ್ ಪ್ರೇರಣೆ ಎಂದರು.

ಆಗಸ್ಟ್ 13 ರಂದು ಸಿಎಂ ಬಸವರಾಜ್ ಬೊಮ್ಮಾಯಿ ಅವರು ಅಂಗಾಂಗ ದಾನಿಗಳ ದಿನದಂದು ತಮ್ಮ ಅಂಗಾಂಗ ದಾನಕ್ಕೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದು ನನ್ನನ್ನೂ ಸೇರಿದಂತೆ ಎಲ್ಲರೂ ಅಂಗಾಂಗ ದಾನ ಮಾಡಲು ಮುಂದೆ ಬರ ಬೇಕೆಂದರು.

**ಗಮನ ಸೆಳೆದ ರಥೋತ್ಸವ:** ಸಾವಿರಾರು ಭಕ್ತರ ಸಮ್ಮುಖದಲ್ಲಿ ಹೂವಿನಿಂದ ಅಲಂಕೃತವಾದ ರಥದಲ್ಲಿ ಪೂಜ್ಯ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ರಥದ ಪೀಠದಲ್ಲಿ ಕುಳಿತು ರಥವನ್ನು ಭಕ್ತರು ಎಳೆದರು. ಮಠದ ವೃತ್ತದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ರಥೋತ್ಸವ ಸಾಗಿತು. ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ರಥವನ್ನು ಎಳೆದರೆ ಎಲ್ಲೆಲ್ಲೂ ಭಕ್ತರು ಜಯಘೋಷ ಮೊಳಗಿಸಿದರು.

**ಪ್ರಸಾದ ವ್ಯವಸ್ಥೆ:** ಜಾತ್ರಾ ಮಹೋತ್ಸವಕ್ಕೆ ಬಂದ ಭಕ್ತರಿಗಾಗೀ ಮಾಲ್ದಿ, ಗೋದಿ ಹುಗ್ಗಿ, ಅನ್ನ, ಸಾಂಬಾರ್ ಪ್ರಸಾದ ವ್ಯವಸ್ಥೆ ಮಾಡಿಸಿದ್ದು, ಸಾವಿರಾರು ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಿಸಿದ್ದು ಯಾರೂ ಕೂಡ ಪ್ರಸಾದವನ್ನು ಹಾಳು ಮಾಡದಂತೆ ರೇಣುಕಾಚಾರ್ಯ ಮನವಿ ಮಾಡಿದರು.

# ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರೇವಣಸಿದ್ದನಗೌಡರಿಗೆ ಬೀಳ್ಕೊಡುಗೆ



ದಾವಣಗೆರೆ, ಆ. 26- ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕ ರೇವಣಸಿದ್ದನಗೌಡ ಅವರಿಗೆ ಉಪ ಕೃಷಿ ನಿರ್ದೇಶಕರಾಗಿ ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಮೇರೆಗೆ ಕೃಷಿ ಬಳಗ ದಾವಣಗೆರೆ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘದ ವತಿಯಿಂದ ಬುಧವಾರ ಕೃಷಿ ಇಲಾಖೆ ಆವರಣದಲ್ಲಿ ಬೀಳ್ಕೊಡುಗೆ ನೀಡಿ, ಸನ್ಮಾನಿಸಲಾಯಿತು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಮಾತನಾಡಿ, ರೇವಣಸಿದ್ದನ ಗೌಡರು ಉತ್ತಮ ಸೇವೆ ಸಲ್ಲಿಸಿದ್ದು, ಮುಂದಿನ ಹುದ್ದೆಯಲ್ಲಿ ಇನ್ನೂ ಹೆಚ್ಚು ರೈತ ಪರ ಕಾರ್ಯ ನಿರ್ವಹಿಸಲಿ ಎಂದು ಶುಭ ಹಾರೈಸಿದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಮಾತನಾಡಿ, ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿ ಇಲಾಖೆ ಪಾತ್ರ ಮಹತ್ತರವಾದದ್ದು, ಇಂತಹ ಇಲಾಖೆಯಲ್ಲಿ ಜನ ಸಾಮಾನ್ಯರ ಪರವಾಗಿ ಸೇವೆ ಸಲ್ಲಿಸುವುದು ಪುಣ್ಯದ ಕೆಲಸ ಎಂದು ಬಣ್ಣಿಸಿದರು.

ಉಪ ಕೃಷಿ ನಿರ್ದೇಶಕ ಆರ್. ತಿಪ್ಪೇಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ರೇವಣಸಿದ್ದನಗೌಡ ಇವರಿಗೆ ಕೃಷಿ ಇಲಾಖೆಯ ಅಧಿಕಾರಿ ನೌಕರರಿಂದ, ರೈತ ಪ್ರತಿನಿಧಿಗಳಿಂದ ಹಾಗೂ ಬೀಜ ಹಾಗೂ ಕೃಷಿ ಉಪಕರಣ ಮಾರಾಟಗಾರರ ಸಂಘ ಮತ್ತು ಜಿಲ್ಲಾ ಸರ್ಕಾರಿ ನೌಕರರ ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ದಾವಣಗೆರೆ ತಾಲ್ಲೂಕಿಗೆ ನೂತನ ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ಅವರನ್ನು ಸ್ವಾಗತಿಸಲಾಯಿತು.

ಸಹಾಯಕ ಕೃಷಿ ನಿರ್ದೇಶಕರಾದ ಆರ್. ಗೋವರ್ಧನ್, ಪವನ್ ಕುಮಾರ್, ನಾರನಗೌಡ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ರಾಜಶೇಖರಪ್ಪ, ಕೃಷಿ ಇಲಾಖಾ ಲಿಪಿಕ ನೌಕರರ ಸಂಘದ ಅಧ್ಯಕ್ಷ ಶಿವಶಂಕರ್, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಗುರುಮೂರ್ತಿ, ಖಜಾಂಚಿ ತಿಪ್ಪೇಸ್ವಾಮಿ ಮತ್ತು ಇತರರು ಹಾಜರಿದ್ದರು.

# ನೀರಾವರಿ ಯೋಜನೆ : ವಿಫಲ

**(1ನೇ ಪುಟದಿಂದ)** ಮಧ್ಯಭಾಗದಲ್ಲಿ ಒಂದು ಎಕರೆ ಜಮೀನು ಹೋಗುತ್ತದೆ. ಪರಿಹಾರ ಕಡಿಮೆ ಕೊಡುತ್ತಾರೆ ಎಂದರು.

ರೈತರನ್ನು ಹೊರಗಡೆ ಕಳುಹಿಸಿ ಹಿರಿಯ ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಚರ್ಚೆ ಮಾಡಿ ಅಂತಿಮವಾಗಿ ಹಿರಿಯ ಅಧಿಕಾರಿಗಳು ರೈತರಿಗೆ ಪರಿಹಾರ ಕೊಡುವ ಸಂಬಂಧ ಸಮಯ ತೆಗೆದುಕೊಂಡಿದ್ದಾರೆ. ಶೀಘ್ರದಲ್ಲಿಯೇ ಇನ್ನೊಮ್ಮೆ ಸಭೆ ಸೇರಿ ಈ ಸಮಸ್ಯೆ ಇತ್ಯರ್ಥ ಪಡಿಸುತ್ತೇವೆ ಹಾಗೂ ಡಿಸೆಂಬರ್ ತಿಂಗಳಲ್ಲಿ ಮುಖ್ಯಮಂತ್ರಿ ಕರೆಯಿಸಿ ಯೋಜನೆ ಉದ್ಘಾಟನೆ ಮಾಡಿಸುತ್ತೇವೆ ಎಂದು ಅವರು ಹೇಳಿದರು.

ಶಾಸಕ ಜಿ.ಕರುಣಾಕರ ರೆಡ್ಡಿ ಸಹ ರೈತರ ಸಮಸ್ಯೆ ಬಗೆಹರಿಸಿ, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿರಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್, ಡಿವೈಎಸ್ಪಿ ಹಾಲಮೂರ್ತಿರಾವ್, ತಹಶೀಲ್ದಾರ್ ಡಾ. ಶಿವಕುಮಾರ ಬಿರಾದಾರ, ನೀರಾವರಿ ನಿಗಮದ ಎಇಇ ಬಸವರಾಜ , ಸಿಪಿಐ ನಾಗರಾಜ ಕಮ್ಮಾರ ಉಪಸ್ಥಿತರಿದ್ದರು.

# ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ

**(1ನೇ ಪುಟದಿಂದ)** ಇಂತಹ ಸಮಸ್ಯೆ ಎಲ್ಲಿ ಪುನರಾವರ್ತನೆ ಆಗ ಬಹುದು ಎಂಬುದನ್ನು ಗಮನಿಸಲು, ಮುಂಜಾಗರೂಕತಾ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

# ಮಲೇಬೆನ್ನೂರು : ಶ್ರೀ ಸಿದ್ಧಾರೂಢ ಆಶ್ರಮದಲ್ಲಿ ಸಿರಿಧಾನ್ಯಗಳ ಪ್ರದರ್ಶನ



ಮಲೇಬೆನ್ನೂರು, ಆ. 26 - ಪಟ್ಟಣದ ಶ್ರೀ ಸಿದ್ಧಾರೂಢ ಆಶ್ರಮದಲ್ಲಿ ಸಿರಿಧಾನ್ಯಗಳ ಪ್ರದರ್ಶನ ಹಾಗೂ ಬಳಕೆ ಮಾಡುವ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದೊಂದಿಗೆ ವರಮಹಾಲಕ್ಷ್ಮಿ ಪೂಜೆ ಆಯೋಜಿಸಲಾಗಿತ್ತು. ಶಿಕ್ಷಕಿ ಶಂಷಾದ್ ಬೇಗಂ ಇವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಒಕ್ಕೂಟದ ಅಧ್ಯಕ್ಷ ರಾದ ರೇಷ್ಮಾಬಾನು, ಪದಾಧಿಕಾರಿ ಶಕುಂತಲಾ, ಸಿರಿಧಾನ್ಯಗಳ ಮೇಲ್ವಿಚಾರಕರಾದ ಸಂತೋಷ್, ಜ್ಞಾನವಿ ಕಾಸ ಸಮನ್ವಯಾಧಿಕಾರಿ ರಕ್ಷಿತಾ, ಸೇವಾ ಪ್ರತಿನಿಧಿ ಶಹತಾಜ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು 'ಸ್ವತಂತ್ರ್ಯತೇ ಭಗವತಿ ಜಯೋಸ್ತುತೆ...'

ದಾವಣಗೆರೆ, ಆ. 26- ಮಿತ್ರ ಮಂಡಳಿ ಇವರ ವತಿಯಿದ ನಾಳೆ ದಿನಾಂಕ 27 ರಂದು ಸಂಜೆ 6 ಗಂಟೆಗೆ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ 'ಸ್ವತಂತ್ರ್ಯತೇ ಭಗವತಿ ಜಯೋಸ್ತುತೆ...' ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಸ್ವಾತಂತ್ರ್ಯ ಹೋರಾಟಗಾರ ವಿನಾಯಕ ದಾಮೋದರ ಸಾವರ್‌ಕರ್ ಅವರಿಗೆ ಗೌರವ ಸಲ್ಲಿಸಲಾಗುವುದು ಎಂದು ಮಾಜಿ ಮೇಯರ್ ಎಸ್.ಟಿ. ವೀರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಸಮಾಜ ಸೇವಕ ಕೆ.ಬಿ. ಶಂಕರನಾರಾಯಣ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಪತ್ರಕರ್ತೆ ಶ್ರೀಲಕ್ಷ್ಮಿ ರಾಜ್‌ಕುಮಾರ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ವೀರ ಸಾವರ್ಕರ್ ಭಾರತ ಕಂಡ ಅತ್ಯಂತ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರ. ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟ ಮಾಡಿದವರು. ಹತ್ತು ವರ್ಷಗಳ ಕಾಲ ಜೈಲಿನಲ್ಲಿದ್ದು ಚಿತ್ರಹಿಂಸೆ ಅನುಭವಿಸಿದವರು. ಅವರ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ ಮಾಡಲಾಗುತ್ತಿದೆ ಎಂದು ವಾದ ಮಾಡುವುದು ಸರಿಯಲ್ಲ ಎಂದರು.

ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡುವುದು. ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುವುದು. ಇತಿಹಾಸ ತಿರುಚುವ ಕೆಲಸ ಆಗುತ್ತಿದೆ. ವೀರ ಸಾವರ್ಕರ್ ದೊಡ್ಡ ಶಕ್ತಿ. ಅವರೊಬ್ಬ ದೇಶಪ್ರೇಮಿ. ಅಟಲ್ ಬಿಹಾರಿ ವಾಜಪೇಯಿ ಸಾವರ್ಕರ್ ಬಗ್ಗೆ ಹೇಳಿರುವ ಮಾತು ಸ್ಫೂರ್ತಿದಾಯಕ ಎಂದು ಹೇಳಿದರು.

ಗಣೇಶೋತ್ಸವದ ನಿಮಿತ್ಯ ಗಣೇಶೋತ್ಸವ ಆಚರಣೆ ಸಮಿತಿಯವರು ಮತ್ತು ಆಸಕ್ತ ಸಾರ್ವಜನಿಕರಿಗೆ ಸಾವರ್ಕರ್, ಬಾಲಗಂಗಾಧರ ತಿಲಕ್ ಹಾಗೂ ಚಿತ್ರನಟ ದಿ. ಪುನೀತ್ ರಾಜ್‌ಕುಮಾರ್ ಭಾವಚಿತ್ರ ಉಚಿತವಾಗಿ ನೀಡಲಾಗುತ್ತಿದೆ.

ಪತ್ರಿಕಾಗೋಷ್ಠಿಯಲ್ಲಿ ಪವನ್, ಜಗದೀಶ್ ಉಪಸ್ಥಿತರಿದ್ದರು.

# ಹರಿಹರದಲ್ಲಿ ವೀರಭದ್ರೇಶ್ವರ ಸ್ವಾಮಿಗೆ ಶ್ರಾವಣ ಪೂಜೆ



ಹರಿಹರ, ಆ. 26- ನಗರದ ವಾಗೀಶ ಬಡಾವಣೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಅಂಗವಾಗಿ ಮಹಾಮಂಗಳಾರತಿ ಹಾಗೂ ಗುಗ್ಗಳದ ಮೂಲಕ ಮೆರವಣಿಗೆ ನೆರವೇರಿಸಲಾಯಿತು.

ನಂತರ ದೇವಸ್ಥಾನದ ಮುಂಭಾಗದಲ್ಲಿ ಭಕ್ತರು ಅಗ್ನಿ ಪ್ರವೇಶ ಮಾಡಿ ವೀರಭದ್ರೇಶ್ವರ ದೇವರ ಆಶೀರ್ವಾದ ಪಡೆದುಕೊಂಡರು. ಈ ಸಂದರ್ಭದಲ್ಲಿ ಪ್ರಧಾನ ಅರ್ಚಕ ಮೃತ್ಯುಂಜಯ ಸ್ವಾಮೀಜಿ, ಜಿ.ಕೆ. ಶಂಕ್ರಪ್ಪ, ಹೆಚ್.ಪಿ. ಅನಿಲ್, ಜಿ.ಕೆ. ನಾಗರಾಜ್, ಕತ್ತಲಗೆರೆ ವೀರೇಶ್, ಹೊಳೆಗದ್ದೆ, ಸಿದ್ದೇಶ್, ಕುಮಾರ್ ಮೆಕ್ಯಾನಿಕ್, ಜಿ.ಕೆ. ಪ್ರವೀಣ್, ಮುರುಗೇಶ್ ಅಂಗಡಿ, ಗಂಗಪ್ಪ ಅಂಗಡಿ, ಶಶಿಧರ್ ಆನ್ವೇರಿ, ಹೆಚ್.ಪಿ. ದೇವರಾಜ್, ಸುಭಾಷ್ ಶೆಟ್ಟಿ, ನಿತಿನ್ , ಹೆಚ್. ಪಿ.ಕಿಶೋರು, ಲ್ಯಾಯಸನ್, ಚೇತನ ಹೆಚ್.ಪಿ. ಹೆಚ್.ಪಿ. ಜಗದೀಶ್ ರಾವುಜಿ ಪಾಟೀಲ್, ಬಸವರಾಜ್ ಜೆ. ಮತ್ತಿತರರು ಹಾಜರಿದ್ದರು.

# ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಆ. 26 - ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿ ಗಳಿಗೆ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಪ್ರವರ್ಗ-1, ಎಸ್.ಸಿ. & ಎಸ್.ಟಿ. ರೂ.2.50 ಲಕ್ಷ, ಪ್ರವರ್ಗ-2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ರೂ.1.00 ಲಕ್ಷ ಇರುತ್ತದೆ. ಅರ್ಜಿಯನ್ನು ವೆಬ್ ಸೈಟ್ www.bcwd.karnataka.gov.in ಸಲ್ಲಿಸಬೇಕು. ಸೆಪ್ಟೆಂಬರ್ 12 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ತಾಲ್ಲೂಕುವಾರು ವಿದ್ಯಾರ್ಥಿನಿಲ ಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ಸಂಪರ್ಕಿ ಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆ ಗಳಾದಲ್ಲಿ bcwd.hostels@karnataka.gov.in ಗೆ ಇ-ಮೇಲ್ ಮುಖಾಂತರ ಅಥವಾ ಸಂಬಂಧಿಸಿದ ತಾಲ್ಲೂಕು ಕಲ್ಯಾಣಾಧಿಕಾರಿ ಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು. ವಿವರಕ್ಕೆ ಸಂಪರ್ಕಿಸಿ : 080-8050370006.


# ಪಕ್ಷಗಳ ಉಚಿತ ಕೊಡುಗೆ ವಿಚಾರಣೆ ತ್ರಿಸದಸ್ಯ ಪೀಠಕ್ಕೆ

**(1ನೇ ಪುಟದಿಂದ)** ದಿನದಂದು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಆದೇಶ ಹೊರಡಿಸಿದ ಪೀಠದಲ್ಲಿ ನ್ಯಾಯಮೂರ್ತಿ ಹಿಮಾ ಕೊಹ್ಲಿ ಹಾಗೂ ಸಿ.ಟಿ. ರವಿಕುಮಾರ್ ಅವರಿದ್ದಾರೆ.

ಈ ವಿಷಯ ಸಂಕೀರ್ಣವಾಗಿದೆ. ಈ ಹಿಂದೆ 2013ರಲ್ಲಿ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಇದೇ ವಿಷಯದ ಬಗ್ಗೆ ತೀರ್ಪೊಂದನ್ನು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಅರ್ಜಿ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ತ್ರಿಸದಸ್ಯ ಪೀಠದ ಎದುರು ವಿಚಾರಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2013ರಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಉಚಿತ ಕೊಡುಗೆಗಳ ಭರವಸೆ ನೀಡುವುದು ಭ್ರಷ್ಟಾಚಾರ ಅಲ್ಲ ಎಂದು ತಿಳಿಸಿತ್ತು.

# ಶಾಂತಿ ಸಭೆ : ಗಣೇಶೋತ್ಸವದ ಮಾರ್ಗಸೂಚಿ ಪಾಲಿಸಲು ಕರೆ



ಹರಿಹರ, ಆ. 26 - ಗೌರಿ ಗಣೇಶೋತ್ಸವ ಹಬ್ಬದ ಆಚರಣೆ ಸಮಯದಲ್ಲಿ, ಸಾರ್ವಜನಿಕರು ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಶಾಂತಿ - ಸಡಗರ ಸಂಭ್ರಮದಿಂದ ಹಬ್ಬ ಆಚರಣೆ ಮಾಡುವುದರ ಜೊತೆಗೆ ಸಮನ್ವಯತೆ ಬೆಳೆಸಲು ದಾರಿಯಾಗಬೇಕು ಎಂದು ಸಿಪಿಐ ಸತೀಶ್ ಕುಮಾರ್ ಹೇಳಿದರು.

ನಗರದ ಪೊಲೀಸ್ ಠಾಣೆಯ ಆವರಣದಲ್ಲಿ ಗಣೇಶೋತ್ಸವ ಆಚರಣೆ ನಿಮಿತ್ತ ನಡೆದ ಶಾಂತಿ ಸಭೆಯಲ್ಲಿ ಅವರು ಮಾತನಾಡಿದರು. ಗಣೇಶೋತ್ಸವ ಹಬ್ಬದ ಸಮಯದಲ್ಲಿ ಕೆಲವು ಕಿಡಿಗೇಡಿಗಳಿಂದ ಸಣ್ಣಪುಟ್ಟ ವ್ಯತ್ಯಾಸಗಳು ಆಗುವ ಸಂಭವ ಇರುತ್ತವೆ. ಹಾಗಾಗಿ ಸಂಘದ ಅಡಿಯಲ್ಲಿ ಪ್ರತಿಷ್ಠಾಪನೆ ಮಾಡುವವರು ಪೆಂಡಾಲ್ ಹತ್ತಿರ ಸಿ.ಸಿ. ಕ್ಯಾಮರಾ ಅಳವಡಿಕೆ ಮಾಡಿಕೊಳ್ಳಬೇಕು ಎಂದರು.

ನಿಯಮಗಳ ಪ್ರಕಾರ ಧ್ವನಿ ವರ್ಧಕಗಳನ್ನು ಬಳಸಬೇಕು. ಬ್ಯಾನರ್, ಬಂಟಿಂಗ್ಸ್, ಫ್ಲೆಕ್ಸ್ ಇವುಗಳ ಅಳವಡಿಕೆಗೆ ಅನುಮತಿ ಪಡೆಯಬೇಕು. ಮೆಟ್ಟಿಲು ಹೊಳೆ ರಸ್ತೆ ಮತ್ತು ತುಂಗಭದ್ರಾ ನದಿ ಸೇತುವೆಯ ಬಳಿ ವಿಸರ್ಜನೆಯ ವ್ಯವಸ್ಥೆ ಮಾಡಲಾಗಿದ್ದು, ಆ ಸ್ಥಳದಲ್ಲಿ ಮಾತ್ರ ಗಣೇಶ ವಿಸರ್ಜನೆಯನ್ನು ಮಾಡಬೇಕು ಎಂದರು.

ತಹಶೀಲ್ದಾರ್ ಎಂ. ಬಿ. ಅಶ್ವತ್ಥ್ ಮಾತನಾಡಿ, ಗಣೇಶ ಪ್ರತಿಷ್ಠಾಪನೆಗೆ ಅಗತ್ಯ ಪರವಾನಗಿಯನ್ನು ಏಕಗವಾಕ್ಷಿ ಅಡಿ ನೀಡಲು ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮಗಳ ಆಯೋಜಕರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಪರವಾನಗಿ ಪಡೆಯಬೇಕು ಎಂದು ಹೇಳಿದರು.

ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, ಹಬ್ಬಕ್ಕಾಗಿ ನಗರಸಭೆ ವತಿಯಿಂದ ಎಲ್ಲಾ ರೀತಿಯಿಂದ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು. ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗುವುದು, ಹೊಳೆ ಹತ್ತಿರ ವಿದ್ಯುತ್ ವ್ಯವಸ್ಥೆ ಮಾಡಲಾಗುವುದು ಎಂದರು.

ಬೆಸ್ಕಾಂ ಇಂಜಿನಿಯರ್ ಲಕ್ಷ್ಮಪ್ಪ ಮಾತನಾಡಿ, ಗಣೇಶ ಮೂರ್ತಿ ವಿಸರ್ಜನೆಯ ಸಮಯದಲ್ಲಿ ವಿದ್ಯುತ್ ವೈರ್ ಅಡ್ಡವಾಗಿ ಇದ್ದರೆ ನಮ್ಮ ಇಲಾಖೆಯ ವತಿಯಿಂದ ಆ ವೈರ್ ತೆರವುಗೊಳಿಸಲಾಗುವುದು. ಏನಾದರೂ ವಿದ್ಯುತ್ ತೊಂದರೆ ಆದರೆ, 9901924945, 9448279034 ಸಂಖ್ಯೆಗಳನ್ನು ಸಂಪರ್ಕಿಸ ಬಹುದು. ಅನಧಿಕೃತ ವಿದ್ಯುತ್ ಸಂಪರ್ಕ ಪಡೆದಿದ್ದು ಗಮನಕ್ಕೆ ಬಂದರೆ,944894832 ಈ ನಂಬರ್‌ಗೆ ಕರೆ ಮಾಡಬೇಕು. ಅಕ್ರಮ ವಿದ್ಯುತ್ ಸಂಪರ್ಕ ಕಡಿತ ಮಾಡಲಾಗುವುದು ಎಂದು ಹೇಳಿದರು.

ಮುಖಂಡರಾದ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಹಬ್ಬದ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ವಿದ್ಯುತ್, ಸ್ವಚ್ಛತೆ ಮುಂತಾದ ಮೂಲಭೂತ ಸೌಕರ್ಯಗಳಿಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು.

ಮುಖಂಡರಾದ ಏಜಾಜ್ ಆಹ್ಮದ್ ಮಾತನಾಡಿ, ಗಾಂಧಿ ಮೈದಾನದಲ್ಲಿ ಸಾರ್ವಜನಿಕ ವಿನಾಯಕ ಮಹೋತ್ಸವ ಸಮಿತಿಯಿಂದ ನಡೆಯುವ ಗಣೇಶೋತ್ಸವಕ್ಕೆ ನಮ್ಮ ಅಲ್ಪ ಸಂಖ್ಯಾತ ಸಮುದಾಯದ ವತಿಯಿಂದ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗುವುದು ಎಂದರು.

ಮುಖಂಡರಾದ ಸನಾವುಲ್ಲಾ, ಸುರೇಶ್ ಚಂದಾಪೂರ್, ಮಹಮ್ಮದ್ ಫೈರೋಜ್, ಎಂ. ಚಿದಾನಂದ ಕಂಚಿಕೇರಿ, ಗೋವಿಂದ, ರಾಜನಹಳ್ಳಿ ಮಂಜುನಾಥ್, ಆಸೀಫ್ ಅಲಿ, ಹೆಚ್.ಸುಧಾಕರ ಪಂಚಾಕ್ಷರಿ, ಹಿಂದೂ ಜಾಗರಣೆ ವೇದಿಕೆಯ ದಿನೇಶ್ ವಿಶ್ವನಾಥ ಮೈಲಾಳ ಮುಂತಾದವರು ಮಾತನಾಡಿದರು.

ಬೆಸ್ಕಾಂ ಇಲಾಖೆಯ ಪವನ್, ಅಗ್ನಿಶಾಮಕ ದಳದ ಸುವಾಸ್, ಪಿಎಸ್‌ಐ ಶಂಕರ್ ಪಾಟೀಲ್, ಗುತ್ತೂರು ಠಾಣೆಯ ಪಿಎಸ್‌ಐ ಅರವಿಂದ್, ಕ್ರೈಮ್ ಪಿಎಸ್‌ಐ ಚಿದಾನಂದ, ಸಂಘಟನೆಯ ಮುಖಂಡರಾದ ಜಗದೀಶ್, ಪೊಲೀಸ್ ಸಿಬ್ಬಂದಿಗಳಾದ ನಾಗರಾಜ್, ದೇವರಾಜ್, ಮಂಜುನಾಥ್, ರಿಜ್ವಾನ್, ಮಂಜುನಾಥ್, ಮುರುಳೀಧರ್ ಮತ್ತಿತರರು ಹಾಜರಿದ್ದರು.

# ಪಾರ್ಥೇನಿಯಂ ಸಪ್ತಾಹ : ಅಪಾಯಕಾರಿ ಪಾರ್ಥೇನಿಯಂ ಕಳೆ ನಿರ್ವಹಣಾ ಕ್ರಮಗಳು

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆಯಲ್ಲಿ ಪ್ರತಿ ವರ್ಷ ಪಾರ್ಥೇನಿಯಂ ತಿಳುವಳಿಕೆ ಸಪ್ತಾಹವನ್ನು ಆಗಸ್ಟ್ ತಿಂಗಳಲ್ಲಿ ಹಮ್ಮಿಕೊಳ್ಳುತ್ತೇವೆ. ಈ ವರ್ಷ 17ನೇ ಪಾರ್ಥೇನಿಯಂ ತಿಳುವಳಿಕೆ ಸಪ್ತಾಹವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಕ್ಷೇತ್ರದ ಸಿಬ್ಬಂದಿ ವರ್ಗದವರು ಶ್ರಮದಾನ ಮಾಡಿ ಪಾರ್ಥೇನಿಯಂ ಕಳೆಯನ್ನು ನಿಯಂತ್ರಣ ಮಾಡಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ಕೃಷಿ ಬೆಳೆಗಳಾದ ಮೆಕ್ಕೆಜೋಳ, ಶೇಂಗಾ, ತೊಗರಿ, ಕಡಲೆ ತಾಕುಗಳಲ್ಲಿ ಹೆಚ್ಚು ಕಂಡುಬಂದಿದ್ದು, ಇದರ ನಿರ್ವಹಣೆಯನ್ನು ಸರಿಯಾದ ಸಮಯಕ್ಕೆ ಮಾಡದಿದ್ದರೆ (ಬಿತ್ತಿದ 30 ದಿವಸದ ಒಳಗೆ) ಬೆಳೆಗಳಲ್ಲಿ ಗಣನೀಯವಾಗಿ ಇಳುವರಿ ಕುಂಠಿತವಾಗುತ್ತದೆ. ತೋಟಗಾರಿಕೆ ಬೆಳೆಗಳಾದ ಅಡಿಕೆ, ಬಾಳೆ, ಪೇರಲ, ಪಪ್ಪಾಯ, ದಾಳಿಂಬೆ ಬೆಳೆಗಳಲ್ಲಿ ಅಧಿಕವಾಗಿ ಕಾಣಿಸಿಕೊಂಡಾಗ ಹೂ ಬರುವ ಮುಂಚೆ ಕಳೆಯನ್ನು ತೆಗೆದು ಉತ್ತಮವಾದ ಗೊಬ್ಬರವಾಗಿ ಮಾಡಿಕೊಳ್ಳಬಹುದು.

**ಪಾರ್ಥೇನಿಯಂ ಪರಿಚಯ** : ಪಾರ್ಥೇನಿಯಂ (ಪಾರ್ಥೇನಿಯಂ ಹಿಸ್ಟಿರೋಫೋರಸ್ : ಕುಟುಂಬ : ಆಸ್ಟೆರೇಸಿ) ಎಂಬ ಈ ಕಳೆಯು ಖಾಲಿ ಇರುವ ಭೂ ಪ್ರದೇಶದಲ್ಲಿ ಬೆಳೆಯುವ ಸಸ್ಯ. ಈ ಕಳೆಯನ್ನು ಕಾಂಗ್ರೆಸ್ ಕಸ, ಗಜ್ಜರಿ ಕಸ ಮುಂತಾದ ಹೆಸರುಗಳಿಂದ ಕರೆಯುವರು. ಈ ಕಳೆಯು ಅಮೇರಿಕ, ಮೆಕ್ಸಿಕೋ, ಟ್ರಿನಿಡಾಡ್ ಮತ್ತು ಅರ್ಜೆಂಟೈನಾ ದೇಶಗಳಿಂದ ಏಕದಳ ಧಾನ್ಯಗಳನ್ನು ಆಮದು ಮಾಡಿಕೊಳ್ಳುವುದರ ಮೂಲಕ ಆಕಸ್ಮಿಕವಾಗಿ ಬಂದಿದೆ ಎಂದು ಊಹಿಸಲಾಗಿದೆ. ಇದು ಭಾರತದಲ್ಲಿ ಪ್ರಪ್ರಥಮವಾಗಿ 1956ರಲ್ಲಿ ಪುಣೆಯಲ್ಲಿ ಕಾಣಿಸಿಕೊಂಡಿತು. ಈ ಸಸ್ಯ ಒಂದು ವಾರ್ಷಿಕ ಮೂಲಿಕೆಯಾಗಿ 0.5 ರಿಂದ 1.5 ಮೀ. ಎತ್ತರದವರೆಗೆ ಬೆಳೆಯುತ್ತದೆ. ಇದು ಮೊಳಕೆಯೊಡೆದ ಒಂದು ತಿಂಗಳಲ್ಲೇ ಹೂ ಬಿಡಲು ಪ್ರಾರಂಭಿಸುತ್ತದೆ. ಇದರ ಪರಾಗರೇಣುಗಳು ಗಾಳಿಯಲ್ಲಿ ಹರಡಿ ಪರಾಗಸ್ಪರ್ಶಗೊಳ್ಳುತ್ತವೆ. ಈ ಗಿಡವು ತನ್ನ ಜೀವಿತಾವಧಿಯಲ್ಲಿ ಸರಿಸುಮಾರು 5,000 ದಿಂದ 25,000 ಬೀಜಗಳನ್ನು ಉತ್ಪಾದಿಸುವ ಗುಣ ಹೊಂದಿದೆ. ಬೀಜಗಳು ಬಹಳ ಹಗುರವಾಗಿರುವುದರಿಂದ ಗಾಳಿಯ ಮೂಲಕ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಪ್ರಸರಣ ಹೊಂದುತ್ತವೆ. ಇದು ಕಾಡು ಬೆಂಕಿಯ ತರಹ ಇಡೀ ಭಾರತವನ್ನು ಆವರಿಸಿಕೊಂಡಿದೆ. ಪಾರ್ಥೇನಿಯಂ ಕಳೆಯು ಕೃಷಿ ಬೆಳೆಗಳಲ್ಲದೆ ರಸ್ತೆ ಹಾಗೂ ರೈಲು ಹಳಿಯ ಬದಿಯಲ್ಲಿ, ಖಾಲಿ ಸ್ಥಳದಲ್ಲಿ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ, ತೆರೆದ ಚರಂಡಿಗಳ ಬದಿಯಲ್ಲಿ ಮತ್ತು ನೀರಾವರಿ ಕಾಲುವೆಗಳಲ್ಲಿ ತುಂಬಾ ಉಪದ್ರವಕಾರಿಯಾದ ಸಸ್ಯ.



ಪಾರ್ಥೇನಿಯಂ ಸಸ್ಯದಲ್ಲಿ 'ಪಾರ್ಥೇನಿನ್' ಎಂಬ ರಾಸಾಯನಿಕ ವಸ್ತುವು ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ಒಂದು ತರದ ಅಲರ್ಜಿಯನ್ನುಂಟು ಮಾಡುವು ದಲ್ಲದೆ, ಚರ್ಮ ಸಂಬಂಧಿತ ಹಲವಾರು ರೋಗಗಳಿಗೆ ಮೂಲ ಕಾರಣವಾಗಿದೆ. ಕೆಲವೊಂದು ಪಶುಗಳು ಇದನ್ನು ತಿನ್ನುವುದರಿಂದ ಅವುಗಳ ಜೀರ್ಣಾಂಗ ವ್ಯೂಹದಲ್ಲಿ ಹುಣ್ಣುಗಳು ಕಂಡುಬಂದಿದ್ದು, ಹಾಲಿನಲ್ಲಿ ಪಾರ್ಥೇನಿನ್ ಅಂಶ ಸಹ ಇದ್ದದ್ದು ಗೋಚರವಾಗಿದೆ.

ಇದರ ಬೀಜಗಳು ಕೃಷಿ ಬೆಳೆಗಳ ಜೊತೆಗೆ ಸೇರಿ ಬೆಳಕು, ನೀರು, ಪೋಷಕಾಂಶಗಳ ಜೊತೆ ಪೈಪೋಟಿ ನಡೆಸಿ ಬೆಳೆಗಳನ್ನು ಸರಿಯಾದ ರೀತಿಯಲ್ಲಿ ಬೆಳೆಯಲು ಬಿಡದೇ ಇಳುವರಿ ಕಡಿಮೆ ಮಾಡುತ್ತವೆ. ಇದಲ್ಲದೆ, ಈ ಕಳೆ ಗಿಡಗಳು ಕೃಷಿ ಬೆಳೆಗಳಿಗೆ ಬರುವ ರೋಗ ಮತ್ತು ಕೀಟಗಳಿಗೆ ಆಶ್ರಯ ತಾಣವಾಗಿವೆ. ಆದ್ದರಿಂದ ನಾವು ಈ ಕಳೆಯನ್ನು ಸಮಂಜಸವಾಗಿ ನಿಯಂತ್ರಿಸಬೇಕಾಗಿದ್ದು ಅತೀ ಅವಶ್ಯಕವಾಗಿದೆ.

**ಪಾರ್ಥೇನಿಯಂ ಕಳೆಯ ಹತೋಟಿ ವಿಧಾನಗಳು :**

**1. ಕೈಕಳೆ ಮಾಡುವಿಕೆ** : ಅನೇಕ ವರ್ಷಗಳಿಂದ ಪಾರ್ಥೇನಿಯಂನ್ನು ಕೈಯಿಂದ ಕಿತ್ತು ನಾಶಪಡಿಸಲಾಗುತ್ತದೆಯಾದರೂ, ಫಲಿತಾಂಶ ಮಾತ್ರ ಅತೃಪ್ತಿಕರವಾಗಿದೆ. ಆದರೂ ಚಿಕ್ಕ ಪ್ರದೇಶಗಳಲ್ಲಿ ಅಂದರೆ ಹೂ-ತೋಟಗಳು, ಹುಲ್ಲು-ಮೈದಾನ, ತರಕಾರಿ ತೋಟ ಹಾಗೂ ತೀವ್ರವಾಗಿ ಸಾಗುವಳಿ ಮಾಡಿದ ಕೃಷಿ ಭೂಮಿಗಳಲ್ಲಿ ಈ ಕ್ರಮ ಪರಿಣಾಮಕಾರಿಯಾಗಿದೆ. ಈ ಕಳೆಯನ್ನು ಹೂ ಬಿಡುವ ಮೊದಲೇ ಬೇರು ಸಹಿತವಾಗಿ ಕಿತ್ತು ಸುಟ್ಟು ಹಾಕಬೇಕು. ಒಂದು ವೇಳೆ ಬೀಜಗಳಾಗಿದ್ದರೆ ಹೆಚ್ಚು ದೂರ ಸಾಗಿಸದೆ, ಸ್ಥಳದಲ್ಲೇ ಸುಡಬೇಕು. ಏಕೆಂದರೆ ಈ ಕಳೆಯು ಮುಖ್ಯವಾಗಿ ಬೀಜಗಳಿಂದ ಪ್ರಸರಣಗೊಳ್ಳುತ್ತದೆ. ಈ ವಿಧಾನದಿಂದ ಕಳೆ ಹತೋಟಿ ಶೀಘ್ರ ಹಾಗೂ ತಾತ್ಕಾಲಿಕ, ಆದರೆ ತೀವ್ರ ಆಕ್ರಮಿತ ಪ್ರದೇಶಗಳಲ್ಲಿ ಕೈಯಿಂದ ಕಳೆ ಕೀಳುವ ವಿಧಾನವು ಆರ್ಥಿಕವಾಗಿ ಲಾಭದಾಯಕವಲ್ಲ ಹಾಗೂ ಆಚರಣೆಗೆ ತರುವುದು ಸಾಧ್ಯವಿಲ್ಲ. ಈ ಕಳೆಯನ್ನು ಕೀಳುವಾಗ ಕೈಚೀಲಗಳನ್ನು ಹಾಕಿಕೊಂಡು ಮತ್ತು ಮೂಗು-ಬಾಯಿ ಮುಚ್ಚುವ ಸಾಧನಗಳನ್ನು ಬಳಸಿ ಸುರಕ್ಷತಾ ಕ್ರಮಗಳನ್ನು ಅನುಸರಿಸುವುದು ಅತ್ಯವಶ್ಯಕ.

**2. ಜೈವಿಕ ವಿಧಾನ** : ಸ್ವಾಭಾವಿಕ ಶತ್ರುಗಳಾದ ಪರೋಪಜೀವಿ, ಪರಭಕ್ಷ ಜೀವಿ ಅಥವಾ ರೋಗಕಾರ ಜೀವಿಗಳನ್ನು ಪೀಡೆಗಳಿಂದಾವೃತವಾದ ಪರಿಸರಕ್ಕೆ ಬಿಡುಗಡೆ ಮಾಡಿ ಅಥವಾ ಈಗಾಗಲೇ ಇರುವಂತಹ ಶತ್ರುಗಳನ್ನು ಮತ್ತಷ್ಟು ಸಂಖ್ಯಾಭಿವೃದ್ಧಿಪಡಿಸಿ, ಪೀಡೆಗೆ ಕಾರಣವಾದ ಜೀವಿಗಳನ್ನು ತಡೆಗಟ್ಟುವುದೇ ಜೈವಿಕ ಹತೋಟಿ. ಈ ಕ್ರಮವು ಅತೀ ಕಡಿಮೆ ವೆಚ್ಚದಾಗಿದ್ದು, ಪರಿಸರ ಪೂರಕವಾಗಿದೆ. ಈ ಕಳೆಯನ್ನು ನಿಯಂತ್ರಿಸಲು ಸಸ್ಯ ಮತ್ತು ಕೀಟ ಶತ್ರುಗಳೆರಡೂ ಇರುವುದು ಬೆಳಕಿಗೆ ಬಂದಿದೆ.

**ಎ. ಸಸ್ಯ ಶತ್ರುಗಳು** : ಇದರಲ್ಲಿ ಎರಡು ವಿಧಾನಗಳಿವೆ. ಮೊದಲನೆಯದು ಸ್ವಾಭಾವಿಕವಾಗಿ ಹತೋಟಿ ಮಾಡಬೇಕಾದ ಪ್ರದೇಶಗಳಲ್ಲಿ ಆಯ್ದ ಸಸ್ಯ ಪ್ರಭೇದಗಳನ್ನು ಬೆಳೆಸುವುದು.

ಇವುಗಳಲ್ಲಿ ಕ್ಯಾಸಿಯಾ ಸೆರೆಸಿಯಾ, ಕ್ಯಾಸಿಯಾ ಟೋರಾ, ಟ್ಯಾಜಿಟಸ್ ಎರಿಕ್ಟಾ, ಟೆಫ್ರೋಸಿಯಾ ಪರ್ಪೊರಿಯ ಮತ್ತು ಇತರೆ ಸಸ್ಯ ಜಾತಿಗಳು ಪಾರ್ಥೇನಿಯಂ ಸಸ್ಯದ ಹರಡುವಿಕೆಯನ್ನು ತಡೆಗಟ್ಟಿರುವುದನ್ನು ಕಾಣಬಹುದು.

ಕೃಷಿ ವಿಶ್ವವಿದ್ಯಾಲಯಗಳಲ್ಲಿ ನಡೆದ ಸಂಶೋಧನೆಗಳಿಂದ ಬೀಳು ಬಿಟ್ಟಿರುವ ಕೃಷಿಯೇತರ ಜಮೀನುಗಳಲ್ಲಿ ಮತ್ತು ಪಾರ್ಥೇನಿಯಂ ಬಾಧಿತ ತೋಟಗಳಲ್ಲಿ ಕ್ಯಾಸಿಯಾ ಸೆರಸಿಯಾ/ಹೆಸರು ತಗಚೆ/ನಾಯಿ ಶೇಂಗಾ ಬೆಳವಣಿಗೆಯನ್ನು ಪ್ರೋತ್ಸಾಹಿಸಬೇಕಾಗಿದೆ. ಈ ಸಸ್ಯವು 'ಕೋಲೈನ್ಸ್' ಎಂಬ ರಾಸಾಯನಿಕ ವಸ್ತುವನ್ನು ಹೊಂದಿದ್ದು, ಪಾರ್ಥೇನಿಯಂ ಬೀಜಗಳ ಮೊಳೆಯುವಿಕೆ ಮತ್ತು ಬೆಳವಣಿಗೆಯನ್ನು ಕುಂಠಿತಗೊಳಿಸುವ ಶಕ್ತಿಯನ್ನು ಹೊಂದಿದೆ. ಇದಲ್ಲದೆ ಈ ಸಸ್ಯವನ್ನು ಮಣ್ಣಿನ ಹೊದಿಕೆಯಾಗಿ, ಹಸಿರು ಗೊಬ್ಬರ ಪೂರೈಕೆಗೆ, ಎರೆಹುಳು ಗೊಬ್ಬರ ತಯಾರಿಕೆಗೆ, ಉರುವಲಾಗಿ ಬಳಸಲು ಹಾಗೂ ಬೀಜಗಳನ್ನು ಅಂಟು ಉತ್ಪಾದನೆಯಲ್ಲಿ ಕಚ್ಚಾ ವಸ್ತುವಾಗಿ ಬಳಸಲು ಉಪಯೋಗಿಸಬಹುದು. ಈ ಸಸ್ಯವು ಪಾರ್ಥೇನಿಯಂ ಬಿಟ್ಟು, ಇತರೆ ಯಾವುದೇ ಸಸ್ಯಗಳ ಮೇಲೆ, ಜಾನುವಾರು ಮತ್ತು ಮಾನವರ ಮೇಲೆ ಅಪಾಯಕಾರಿ ಪರಿಣಾಮವನ್ನು ಹೊಂದಿರುವುದಿಲ್ಲ.

**ಬಿ. ಕೀಟ ಶತ್ರುಗಳು** : ಭಾರತದಲ್ಲಿ ಸುಮಾರು 50 ಜಾತಿಯ ಕೀಟಗಳು ಪಾರ್ಥೇನಿಯಂ ಕಳೆಯನ್ನು ತಿನ್ನುವುದನ್ನು ಗಮನಿಸಲಾಗಿದೆ. ಆದರೆ ಇವ್ಯಾವು ಪಾರ್ಥೇನಿಯಂ ಒಂದನ್ನೇ ಭಕ್ಷಿಸಿ ಜೀವಿಸುವುದಿಲ್ಲ. ಆದಕಾರಣ ಮೆಕ್ಸಿಕೋದ ಎಲೆ ಭಕ್ಷಕ ದುಂಬಿ, ಜೈಗೋಗ್ರಾಮಾ ಬೈಕೋಲೋರೇಟವನ್ನು 1982ರಲ್ಲಿ ಬೆಂಗಳೂರಿಗೆ ಪರಿಚಯಿಸಲಾಯಿತು. ಅನೇಕ ಪರೀಕ್ಷೆಗಳ ನಂತರ, ಈ ದುಂಬಿಗಳನ್ನು ಪ್ರಪ್ರಥಮವಾಗಿ 1984ರಲ್ಲಿ ಬೆಂಗಳೂರಿನ ಸುಲ್ತಾನ್‌ಪಾಳ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲಾಯಿತು.

ಪ್ರೌಢ ದುಂಬಿಯು ಸುಮಾರು 16 ಮಿ.ಮೀ ಉದ್ದವಿದ್ದು, ಜೀವಿತಾವಧಿಯಲ್ಲಿ ಒಂಟಿಯಾಗಿ ಇಲ್ಲವೇ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಪಾರ್ಥೇನಿಯಂ ಎಲೆಗಳ ಕೆಳ ಅಂಚಿನಲ್ಲಿ ಸುಮಾರು 2,500 ಮೊಟ್ಟೆಗಳನ್ನಿಡುತ್ತವೆ. ಈ ಮೊಟ್ಟೆಗಳು ತಿಳಿ ಹಳದಿ ಬಣ್ಣದಾಗಿದ್ದು, 4 ರಿಂದ 7 ದಿನಗಳಲ್ಲಿ ಮರಿಹುಳುಗಳು ಹೊರಬರುತ್ತವೆ. ಈ ಹುಳುಗಳು ತೀವ್ರವಾಗಿ ಎಲೆ ಹಾಗೂ ಮೊಗ್ಗುಗಳನ್ನು ತಿಂದು ಬರಿದು ಮಾಡುವುದರಿಂದ ಸಸ್ಯದ ಬೆಳವಣಿಗೆ ಮತ್ತು ಹೂಗಳ ಉತ್ಪಾದನೆ ಕುಂಠಿತವಾಗುತ್ತದೆ. ಸುಮಾರು 10 ರಿಂದ 15 ದಿನಗಳ ನಂತರ ಈ ಹುಳುಗಳು ಮಣ್ಣಿನಲ್ಲಿ ಕೋಶಾವಸ್ಥೆ ಹೊಂದುತ್ತವೆ. ದುಂಬಿಗಳು 8 ರಿಂದ 12 ದಿನಗಳಲ್ಲಿ ಹೊರಬರುತ್ತವೆ. ಈ ಕೀಟವು 27 ರಿಂದ 32 ದಿನಗಳಲ್ಲಿ ತನ್ನ ಬೆಳವಣಿಗೆಯ ಅವಧಿಯನ್ನು ಪೂರ್ತಿಗೊಳಿಸುತ್ತದೆ. ಈ ದುಂಬಿಯ ಚಟುವಟಿಕೆ ಮಳೆಗಾಲದಲ್ಲಿ ಅಂದರೆ ಜೂನ್‌ನಿಂದ ಅಕ್ಟೋಬರ್ ತಿಂಗಳುಗಳಲ್ಲಿ ಹೆಚ್ಚಾಗಿರುತ್ತವೆ. 500 ರಿಂದ 1000 ದುಂಬಿಗಳನ್ನು ಬಿಡುವುದರಿಂದ ಪಾರ್ಥೇನಿಯಂ ಕಳೆಯನ್ನು ಹತೋಟಿ ಮಾಡುವುದಲ್ಲದೆ, ದುಂಬಿಯ ವೃದ್ಧಿಗೂ ಸಹಕಾರಿಯಾಗುತ್ತದೆ.

**3. ರಾಸಾಯನಿಕ ವಿಧಾನ** : ಹಲವಾರು ಆಯ್ದ ಕಳೆನಾಶಕಗಳಾದ 2,4-ಡಿ, ಪ್ಯಾರಾಕ್ವಾಟ್, ಬ್ರೊಮಾಸಿಲ್, ಗ್ಲೈಫೋಸೇಟ್‌ಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಸಿಂಪಡಿಸಿದರೆ ಬೆಳೆದು ನಿಂತ ಪಾರ್ಥೇನಿಯಂ ಸಸ್ಯವನ್ನು ಕೊಲ್ಲುವುದಲ್ಲದೆ ಮಣ್ಣಿನಲ್ಲಿರುವ ಬೀಜಗಳ ಮೊಳಕೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡುತ್ತವೆ. ಆದರೆ ಈ ಕಳೆನಾಶಕಗಳ ಪರಿಣಾಮ ದೀರ್ಘಕಾಲ ಇರುವುದಿಲ್ಲವಾದ್ದರಿಂದ ಮತ್ತು ಪದೇ ಪದೇ ಬಳಸಬೇಕಾಗಿರುವುದರಿಂದ ಸಾರ್ವಜನಿಕ ಹಾಗೂ ಬೀಳುಬಿಟ್ಟಿರುವ ಸ್ಥಳಗಳಲ್ಲಿ ಈ ಕ್ರಮವು ತುಂಬಾ ದುಬಾರಿ ಎನಿಸುತ್ತದೆ. ಇದಲ್ಲದೇ, ಪರಿಸರ ಕೂಡ ಮಲಿನಗೊಳ್ಳುವ ಸಂಭವವಿದೆ.

ಆದ್ದರಿಂದ, ಕ್ಯಾಸಿಯಾ ಸೆರಿಸಿಯಾ ಮತ್ತು ಜೈಗೋಗ್ರಾಮಾ ಬೈಕೋಲೋರೇಟಾ ದುಂಬಿಗಳನ್ನು ಬಳಸಿ, ಒಂದೆರೆಡು ಬಾರಿ ಆಯ್ದ ಕಳೆನಾಶಕಗಳನ್ನು ಸಿಂಪಡಿಸುವುದರ ಮೂಲಕ ಪಾರ್ಥೇನಿಯಂ ಕಳೆಯನ್ನು ಸಮಗ್ರವಾಗಿ ಹತೋಟಿ ಮಾಡಬಹುದು.

- ಬಿ.ಓ. ಮಲ್ಲಿಕಾರ್ಜುನ,
ಬೇಸಾಯ ತಜ್ಞರು ಮತ್ತು
**ಡಾ|| ಟಿ.ಎನ್. ದೇವರಾಜ,**
ಮುಖ್ಯಸ್ಥರು ಹಾಗೂ ಹಿರಿಯ ವಿಜ್ಞಾನಿಗಳು
ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ,
ದಾವಣಗೆರೆ.

## ಹರ ಮುನಿದರೂ ಗುರು ಕಾಯುವನು : ಶಿಕ್ಷಣಾಧಿಕಾರಿ ಟಿ.ಅಂಬಣ್ಣ



ದಾವಣಗೆರೆ, ಆ.27- ಯಾರಿಗೆ ಗುರುವಿನ ಸಾಕ್ಷಾತ್ಕಾರ ಸಿಗುತ್ತದೆಯೋ ಅವರು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗುತ್ತಾರೆ ಎಂದು ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಅಂಬಣ್ಣ ಅಭಿ ಪ್ರಾಯಪಟ್ಟರು. ತಾಲ್ಲೂಕಿನ ಕಾಡಜ್ಜಿ ಗ್ರಾಮದಲ್ಲಿ ಗೆಳೆಯರ ಬಳಗದಿಂದ ಹಮ್ಮಿಕೊಂಡಿದ್ದ 'ಗುರು ನಮನ ಹಾಗೂ ಸ್ನೇಹ ಮಿಲನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗುರುವಿನ ಬಗ್ಗೆ ಎಷ್ಟು ಹೇಳಿದರೂ ಸಾಲದು. ಗುರು ಬ್ರಹ್ಮನು, ವಿಷ್ಣುವು ಮತ್ತು ಮಹೇಶ್ವರನೂ ಹೌದು. 'ಹರ ಮುನಿದರೆ ಗುರು ಕಾಯುವನು' ಎಂಬಂತೆ ಒಂದು ವೇಳೆ ದೇವರು ಮುನಿಸಿಕೊಂಡರೂ ಗುರು ಕಾಯುತ್ತಾನೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಎಸ್‌ಡಿಎಂಸಿ ಅಧ್ಯಕ್ಷ ಡಿ.ತಿರುಪತಿ, ನಿವೃತ್ತ ಉಪನ್ಯಾಸಕ ಶಿವಕುಮಾರ್ ಮಾತನಾಡಿ, ಗುರು ನಮನ ಕಾರ್ಯಕ್ರಮದ ಮಹತ್ವದ ಬಗ್ಗೆ ತಿಳಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕರಾದ ಗಾಳೆಪ್ಪ, ಎಂ.ಆರ್. ಚನ್ನಬಸವಯ್ಯ, ಗೌರಮ್ಮ, ಎ.ಕೆ. ರಾಮಪ್ಪ, ಎ.ಡಿ. ರೇವಣಸಿದ್ದಪ್ಪ, ಬಿಸಲೇರಿ ಬಸಮ್ಮ ಭೀಮಪ್ಪ ಪ್ರೌಢಶಾಲೆಯ ನಿವೃತ್ತ ಶಿಕ್ಷಕ ಆರ್. ಬಿ. ತಿಮ್ಮಪ್ಪ, ಹೆಚ್. ಬಸಪ್ಪ, ಎಂ. ರಾಜಶೇಖರಯ್ಯ, ಕೆ.ಹೆಚ್. ಪರಶುನಾಯಕ್, ಕೆ.ಬಿ. ಹನುಮಂತಪ್ಪ, ಬಿಸಲೇರಿ ಬಸಮ್ಮ ಭೀಮಪ್ಪ ಪೌಢಶಾಲೆಯ ಮುಖ್ಯೋಪಾಧ್ಯಾಯ ಎಂ. ಬಿ. ಜಯದೇವಪ್ಪ, ದೈಹಿಕ ಶಿಕ್ಷಕ ಕೆ.ಬಿ. ಶೇಖರಪ್ಪ ಅವರಿಗೆ ಗುರು ನಮನ ಸಲ್ಲಿಸಲಾಯಿತು.

ಗುರು ನಮನ ಸ್ವೀಕರಿಸಿದ ನಿವೃತ್ತ ಶಿಕ್ಷಕರಾದ ಕೆ.ಹೆಚ್. ಪರಶುನಾಯಕ್, ಗಾಳೆಪ್ಪ ಮತ್ತು ಆರ್.ಬಿ. ತಿಮ್ಮಪ್ಪ ಅವರು ಮಾತನಾಡಿ, ಗೆಳೆಯರ ಬಳಗದ ಕಾರ್ಯಕ್ರಮವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕಿ ಸುಶೀಲಮ್ಮ ಮತ್ತು ಪ್ರಾಥಮಿಕ ಶಾಲೆಯ ಹಾಲಿ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಅಧ್ಯಕ್ಷತೆಯನ್ನು ಗ್ರಾ.ಪಂ. ಅಧ್ಯಕ್ಷರಾದ ಗೀತಮ್ಮ ವಹಿಸಿದ್ದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಡ್ತಿ ಮುಖ್ಯೋಪಾಧ್ಯಾಯ ಕೆ.ಎಸ್. ನಾಗರಾಜಪ್ಪ, ಗ್ರಾ.ಪಂ. ಸದಸ್ಯೆ ಶೈಲಜಾ ಬಸವರಾಜ್, ಶಿಕ್ಷಣ ಸಂಯೋಜಕಿ ಸರಳ ಗೌರೋಜಿ, ಬಿ.ಆರ್.ಪಿ. ಜಿ. ಯೋಗೇಂದ್ರನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗೆಳೆಯರ ಬಳಗದ ಪಿ.ಮಂಜುನಾಥ ಕಾಡಜ್ಜಿ, ಎ.ಎಚ್. ರಮೇಶ್, ಹೆಚ್.ಎಸ್. ಶಾಂತಕುಮಾರ್, ಬಿ. ಹನುಮಂತಪ್ಪ, ಎಸ್. ಚಂದ್ರಶೇಖರಪ್ಪ, ಜೆ.ಸಿದ್ದಪ್ಪ, ಕೆ.ಆರ್. ಸಿದ್ದಪ್ಪ, ಕೆ.ಹನುಮಂತಪ್ಪ, ಕೆ.ಆರ್. ಸುರೇಶ್, ಕೆ.ಎಂ. ನಾಗರಾಜಯ್ಯ, ಆರ್.ಎಚ್. ಶಿವಪ್ಪ, ಕೆ.ಆರ್. ನಾಗರಾಜ್, ಕೆ.ಆರ್. ಲೋಕೇಶ್, ಕೆ.ಎಸ್. ಗಿರೀಶ್‌ರೆಡ್ಡಿ, ಕೆ.ತಿಮ್ಮಪ್ಪ, ಬಿ.ಸಿ.ಲೋಕೇಶ್ವರಪ್ಪ, ಕೆ. ಎಂ.ಶಿವಕುಮಾರ್, ಎಂ.ಜಿ.ನಾಗರಾಜ್, ಟಿ. ಎಸ್. ಚನ್ನಪ್ಪ, ಹೆಚ್. ಗಂಗಾಧರ್, ಕೆ.ಎಂ. ಭಾಗ್ಯಮ್ಮ ಮತ್ತಿತರರು ಹಾಜರಿದ್ದರು.

ಬಳಗದ ಭಾಗ್ಯಮ್ಮ ಪ್ರಾರ್ಥಿಸಿದರು. ಹೆಚ್.ಎಸ್.ಶಾಂತಕುಮಾರ್ ಸ್ವಾಗತಿಸಿದರು. ಪಿ.ಮಂಜುನಾಥ ಕಾಡಜ್ಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಲ್.ಐ.ಸಿ. ಅಭಿವೃದ್ಧಿ ಅಧಿಕಾರಿ ಕೆ. ಶ್ರೀಕಾಂತಭಟ್ ನಿರೂಪಿಸಿದರು. ಎ.ಎಚ್. ರಮೇಶ್ ವಂದಿಸಿದರು.

## ಚುಟುಕು ಸಾಹಿತ್ಯ ಪರಿಷತ್‌ನಿಂದ ಚಿತ್ರ ಬರೆಯುವ ಸ್ಪರ್ಧೆ



ದಾವಣಗೆರೆ, ಆ.26- ಚುಟುಕು ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಶ್ರೀ ಮೌನೇಶ್ವರ ಶ್ರವಣ ನ್ಯೂನತಾ ಮಕ್ಕಳ ವಸತಿಯುತ ಪೌಢಶಾಲೆಯಲ್ಲಿ ಮಕ್ಕಳಿಗೆ ಚಿತ್ರ ಬರೆಯುವ ಸ್ಪರ್ಧೆ ಏರ್ಪಡಿಸಲಾಗಿತ್ತು.

ಭಾಗವಹಿಸಿದ ಮಕ್ಕಳಿಗೆ ಬಹುಮಾನ ಮತ್ತು ಅಭಿನಂದನಾ ಪತ್ರವನ್ನು ನೀಡಿತು.

ಕಾರ್ಯಕ್ರಮದಲ್ಲಿ ಚುಟುಕು ಸಾಹಿತ್ಯ ಪರಿಷತ್‌ನ ಜಿಲ್ಲಾ ಅಧ್ಯಕ್ಷ ರಾಜಶೇಖರ್ ಗುಂಡಗಟ್ಟಿ, ಎ.ಕೆ. ಫೌಂಡೇಷನ್ ಅಧ್ಯಕ್ಷ ಕೆ.ಬಿ. ಕೊಟ್ರೇಶ್, ಶಿವಯೋಗಿ ಹಿರೇಮಠ, ಓಂಕಾರಯ್ಯ ತವನಿಧಿ, ಕೆ.ಎಸ್. ವೀರಭದ್ರಪ್ಪ ತೆಲಿಗಿ, ಶ್ರೀಮತಿ ಎಸ್. ಉಮಾದೇವಿ, ರವಿಕುಮಾರ್ ರೆಡ್ ಕ್ರಾಸ್, ಶಿವಾನಂದಪ್ಪ, ಶಾಲೆಯ ಮುಖ್ಯೋಪಾಧ್ಯಾಯ ಹೆಚ್. ಸಿದ್ದೇಶಪ್ಪ. ಎ.ಡಿ.ಇಟಗಿ ಸರ್, ಶ್ರೀಮತಿ ಶಾರದಮ್ಮ, ಶ್ರೀಮತಿ ದ್ರಾಕ್ಷಾಯಿಣಮ್ಮ, ಶ್ರೀಮತಿ ಇಂದಿರಾ (ಸಹ ಶಿಕ್ಷಕರು) ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಶ್ರೀಮತಿ ಉಮಾದೇವಿ ಪ್ರಾರ್ಥಿಸಿದರು. ಕೆ.ಎಸ್. ವೀರಭದ್ರಪ್ಪ ಸ್ವಾಗತಿಸಿದರು. ಶಾಲಾ ಕೆಲ ಮಕ್ಕಳು ಅವರ ಕೈ ಬೆರಳುಗಳ ಸನ್ನೆಗಳ ಮೂಲಕ ಕೃತಜ್ಞತೆ ಹೇಳಿಕೊಳ್ಳುವ ಮೂಲಕ ಸಂತೋಷ ವ್ಯಕ್ತಪಡಿಸಿದರು. ಎ.ಡಿ. ಇಟಗಿ ವಂದನಾರ್ಪಣೆ ಸಲ್ಲಿಸಿದರು.

## ಜಮುರಾ ಕಲಾವಿದರ ಆಯ್ಕೆಗೆ ಅರ್ಜಿ ಆಹ್ವಾನ

ದಾವಣಗೆರೆ, ಆ.26- ಚಿತ್ರದುರ್ಗ ಶ್ರೀ ಮುರುಘ ರಾಜೇಂದ್ರ ಬೃಹನ್ಮಠದ ಜಮುರಾ ಕಲಾಲೋಕದಿಂದ ಕಲಾವಿದರ ಆಯ್ಕೆಗೆ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆಯಾದ ಕಲಾವಿದರಿಗೆ ಅನುಭವಿ ನಿರ್ದೇಶಕರಿಂದ ರಂಗ ತರಬೇತಿ, ನಾಟಕ ರಚನೆ, ರಂಗ ಸಿದ್ಧತೆ, ಪ್ರಸಾಧನ, ಧ್ವನಿ ವ್ಯವಸ್ಥೆ, ಬೆಳಕು ಸಂಯೋಜನೆ ಬಗ್ಗೆ ತರಬೇತಿ ನೀಡಲಾಗುತ್ತದೆ ಮತ್ತು ಎರಡು ನಾಟಕಗಳಲ್ಲಿ ಅಭಿನಯಿಸಲು ಅವಕಾಶವಿರುತ್ತದೆ. ಆಸಕ್ತರು ಸ್ವವಿವರವುಳ್ಳ ಅರ್ಜಿಯೊಂದಿಗೆ ಸೆಪ್ಟಂಬರ್ 6 ರಂದು ಬೆಳಿಗ್ಗೆ 10.30 ಕ್ಕೆ ವ್ಯವಸ್ಥಾಪಕರು, ಜಮುರಾ ಕಲಾಲೋಕ, ಶ್ರೀ ಮುರುಘಾ ಮಠ ಚಿತ್ರದುರ್ಗ ಇಲ್ಲಿ ನಡೆಯುವ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.

## ಹರಿಹರದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದು ರುದ್ರಾಭಿಷೇಕ

ಕ್ಷೇತ್ರನಾಥ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ಕ್ಷೇತ್ರನಾಥ ಶ್ರೀ ವೀರಭದ್ರ ಸ್ವಾಮಿಗೆ ಇಂದು ಬೆಳಿಗ್ಗೆ 7 ಗಂಟೆಗೆ ರುದ್ರಾಭಿಷೇಕ, 108 ಬಿಲ್ವಾರ್ಚನೆ, ಅಲಂಕಾರ ನಡೆಯುವುದು. ಪೌರೋಹಿತ್ಯವನ್ನು ವೇ. ಮೃತ್ಯುಂಜಯಸ್ವಾಮಿ ವಿ. ಬೂಸ್ನೂರು ನೆರವೇರಿಸುವರು.

## ಗಣೇಶ್ ಶೆಣೈ ಅವರಿಗೆ 'ಅಮ್ಮ' ರಾಜ್ಯ ಪ್ರಶಸ್ತಿ ಪ್ರದಾನ



ದಾವಣಗೆರೆ,ಆ.26- ಶ್ರೀಮತಿ ರತ್ನಾಬಾಯಿ ಶ್ರೀ ಕಲ್ಲಪ್ಪ ಉದಗಟ್ಟಿ ಪ್ರತಿಷ್ಠಾನದ ವತಿಯಿಂದ ತುಮಕೂರಿನ ರೋಜಾ ಪ್ಯಾಲೇಸ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಅವರಿಗೆ ರಾಜ್ಯ ಮಟ್ಟದ 'ಅಮ್ಮ' ಪ್ರಶಸ್ತಿ ನೀಡಿ ನೀಡಲಾಯಿತು. ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಈ ಸಮಾರಂಭದಲ್ಲಿ ಮಾಜಿ ಸಚಿವ ಡಾ. ಜಿ.ಪರಮೇಶ್ವರ, ಶಾಸಕ ಎಂ.ಪಿ.ರೇಣುಕಾಚಾರ್ಯ, ಶ್ರೀಮತಿ ಗೀತಾ ಶಿವರಾಂ, ನಟ ಧರ್ಮ, ಜಿ.ನಾರಾಯಣಸ್ವಾಮಿ, ಡಾ. ಬಾಳಾ ಸಾಹೇಬ್ ಉದಗಟ್ಟಿ, ಅರವಿಂದಾಕ್ಷ ಉಪಸ್ಥಿತರಿದ್ದರು.

## ಲಿಂಗೇಶ್ವರ ಸ್ವಾಮಿ ರಥೋತ್ಸವ ನಾಳೆ

**(1ನೇ ಪುಟದಿಂದ)** ನಡೆಸಲು ಸಾಧ್ಯವಾಗಿರಲಿಲ್ಲ. ಈ ವರ್ಷ ಶ್ರೀ ಸ್ವಾಮಿ ರಥೋತ್ಸವ ಪದ್ಧತಿ ಪ್ರಕಾರ ನಡೆಸಲು ದೇವಸ್ಥಾನದ ಆಡಳಿತ ಮಂಡಳಿ ತೀರ್ಮಾನಿಸಿದೆ. ಭಕ್ತಾದಿಗಳು ಪೂಜಾ ಕಾರ್ಯಕ್ರಮ ಮತ್ತು ರಥೋತ್ಸವ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ದೇವಸ್ಥಾನದ ಆಡಳಿತ ಮಂಡಳಿ ಕೋರಿದೆ.

**ಮಣಿಪಾಲ್ ಆರೋಗ್ಯ ಕಾರ್ಡ್**
ಹೊಸ ಕಾರ್ಡ್ ಮತ್ತು ರಿನಿವಲ್ ಮಾಡಿಕೊಳ್ಳಲು 31.8.2022 ಕೊನೆಯ ದಿನಾಂಕ ಹಾಗೂ ಈ ವರ್ಷದ ಕೊನೆಯ ಅವಕಾಶ.
ಸಂಪರ್ಕಿಸಿ : ಮಣಿಪಾಲ್ ಮಾಹಿತಿ ಕೇಂದ್ರ, ತ್ರಿಶೂಲ್ ಟಾಕೀಸ್ ರಸ್ತೆ, ಕಾವೇರಮ್ಮ ಶಾಲೆಯ ಹತ್ತಿರ, ಕೆ.ಬಿ ಬಡಾವಣೆ, ದಾವಣಗೆರೆ.
89709 92502

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್ ಜೈನ್ ಲೇಔಟ್, 2ನೇ ಮೇನ್, 2ನೇ ಕ್ರಾಸ್, DR/1885/81 ರಲ್ಲಿ ಬರುವ ಪೂರ್ವ ಫೇಸ್, 3ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
97392 04631, 88673 58631

**ಮನೆ ಬಾಡಿಗೆಗೆ ಇದೆ**
MCC 'B' Block ದಾವಣಗೆರೆ # 3811, 19 ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಮೊದಲನೇ ಫ್ಲೋರ್‌ನಲ್ಲಿ 1 BHK ಮನೆ ಬಾಡಿಗೆಗೆ ಇದೆ (ಸಸ್ಯಹಾರಿಗಳಿಗೆ ಮಾತ್ರ)
08192-223074
94491 88233

**ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ ಜಯನಗರ ಬಿ ಬ್ಲಾಕ್‌ನಲ್ಲಿ ಬೋರ್‌ನೀರಿನ ಸೌಲಭ್ಯವಿರುವ ಸಿಂಗಲ್ ಬೆಡ್ ರೂಂ ಮನೆಗಳು ಬಾಡಿಗೆಗೆ ಇವೆ.
98440 21743
99646 95557

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
Part time teacher only on Saturday and Sunday.
Contact:
9900142952

**WANTED**
1. Recepionist
2. Staff Nurses
3. Lab Technician
SHILPA DIAGNOSTICS
MCC B Block Near Swimming Pool, Davangere.
98440 65638

**ಮನೆ ಬಾಡಿಗೆಗೆ ಇದೆ**
1BHK ಮನೆ 2nd Floor For Rent # 3425/22 4th Main, 11th Cross, S S Layout 'B' Block Davanagere
96638 28202
96320 60242

**ಸೈಟ್ ಮಾರಾಟಕ್ಕಿದೆ**
ರಾಜೀವ್‌ಗಾಂಧಿ ಬಡಾವಣೆಯಲ್ಲಿ 20x30 ಪಶ್ಚಿಮ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
83106 11169
98446 33119

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. ಸುಲಭ ಕಂತಿನಲ್ಲಿ ಲಭ್ಯ.
30×40, 30x50
98441 24217, 94481 55202
86603 11021 , 93431 10009

**ಆಫೀಸ್/ಮನೆಗೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 4ನೇ ಮುಖ್ಯರಸ್ತೆಯಲ್ಲಿ 1ನೇ ಮಹಡಿಯ ಸುಮಾರು 2000 ಚ. ಅಡಿ. 3 BHK ಬಿಲ್ಡಿಂಗ್ ಆಫೀಸ್ ಅಥವಾ ಮನೆ ಉಪಯೋಗಕ್ಕೆ ಬಾಡಿಗೆಗೆ ಇದೆ.
ಫೋ. : 98441 88191

**ಗೌರಿ ಗಣೇಶ ಹಬ್ಬದ ಕೊಡುಗೆ**
FULLY AUTO MATIC
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್ ಆಫರ್ : 1000 /- OFF
ಸೇಲ್ಸ್, ಸರ್ವೀಸ್‌ಗಾಗಿ ಸಂಪರ್ಕಿಸಿ
ಮರುತ್ ಎಂಟರ್‌ಪ್ರೈಸಸ್
ವೈ.ಎಂ.ಸಿ ಕಾಂಪ್ಲೆಕ್ಸ್, ಹದಡಿ ರಸ್ತೆ ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಹೊಸ ಮನೆ ಮಾರಾಟಕ್ಕಿದೆ**
S.S. Layout 'B' Block, 3rd Main ಅಳತೆ: 20x65 ಪಶ್ಚಿಮ ದಿಕ್ಕು ಗ್ರೌಂಡ್ ಫ್ಲೋರ್, 1st ಫ್ಲೋರ್, 2nd ಫ್ಲೋರ್
90191 19905

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಕೊಟ್ಟೂರೇಶ್ವರ ಬಡಾವಣೆ ನಿಟುವಳ್ಳಿಯಲ್ಲಿ ಎರಡನೇ ಮಹಡಿಯಲ್ಲಿ ಪೂರ್ವ ದಿಕ್ಕಿನ, ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆ/ಲೀಸ್‌ಗೆ ಇದೆ.
96634 65543

**ಮನೆ ಬಾಡಿಗೆಗೆ, ಲೀಸ್‌ಗೆ ಇವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್ ರೂಂ, 2 ಬಾತ್ ರೂಂ ಇರುವ ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ. ಸಂಪರ್ಕಿಸಿ
96388 17967, 73380 43912

**ಮನೆ ಬಾಡಿಗೆಗೆ ಇದೆ**
ಸರಸ್ವತಿ ನಗರ ಮುಖ್ಯ ರಸ್ತೆ ದುರ್ಗಾಂಬಿಕಾ ಸ್ಕೂಲ್ ಹತ್ತಿರ 2 ಬೆಡ್ ರೂಂ ಇರುವ ಮುನಿಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ 2ನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ
99028 55395

**ಮನೆ ಬಾಡಿಗೆಗೆ ಇದೆ**
# 641/15, ಉತ್ತಮ ಲೇಔಟ್, ಆವರಗೆರೆ, ದಾವಣಗೆರೆ ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಎಲ್ಲಾ ಸೌಕರ್ಯವಿದೆ.
99644 90568, 70196 32334

**ಬೋರ್‌ವೆಲ್ ಮಷಿನ್ ಮಾರಾಟಕ್ಕೆ ಇದೆ**
ಶಾಮನೂರು ದೇವರ ಬೆಳಕೆರೆ ರಸ್ತೆ 5ಹೆಚ್.ಪಿ 10 ಸ್ಟೇಜ್, 5 ಹೆಚ್.ಪಿ 5 ಸ್ಟೇಜ್, 2" ಜಿ.ಐ ಪೈಪು 195 ಅಡಿ, L&T ಸ್ಟಾರ್ಟರ್. 40 ಸಾವಿರ ರೇಟ್‌ನಲ್ಲಿ ಮಾರಾಟಕ್ಕಿದೆ.
94828 18253

**ಬೇಕಾಗಿದ್ದಾರೆ**
ನುರಿತ ವಾಹನ ಚಾಲಕರು ಬೇಕಾಗಿದ್ದಾರೆ.
94488 39229, 94492 66133

**E-BIKE 0% INTEREST EMI**
ಎಲೆಕ್ಟ್ರಿಕ್ ಬೈಕ್ ಕೇವಲ 10 ರೂ ನಲ್ಲಿ 100 KM ಓಡಿಸಿ.
ಮರುತ್ ಎಂಟರ್‌ಪ್ರೈಸಸ್
ವೈ.ಎಂ.ಸಿ ಕಾಂಪ್ಲೆಕ್ಸ್, ಹದಡಿ ರಸ್ತೆ ಸ್ಟೇಡಿಯಂ ಎದುರು ದಾವಣಗೆರೆ.
98868 96574 (T&C)

**ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ ಮತ್ತು ರಾಣೇಬೆನ್ನೂರು ಸುತ್ತ ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI, PF ಸೌಲಭ್ಯ ಇದೆ.
ಹೈ ಅಲರ್ಟ್ ಸೆಕ್ಯೂರಿಟಿ ಸರ್ವೀಸ್
78990 15677, 96113 94063

**FOR RENT**
RCC Godown 11x50
Opp : Aruna Talkies, P.B.Road
**FOR SALE**
30x100, K.R. Road
98440 73939

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**ವಾಹನ ಚಾಲಕರು ಬೇಕಾಗಿದ್ದಾರೆ**
50 ವರ್ಷ ಮೇಲ್ಪಟ್ಟ ವಾಹನ ಚಾಲಕರು ಬೇಕಾಗಿದ್ದಾರೆ.
ವಿಚಾರಿಸಿ :
94488 39229, 94492 66133

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಮೊ : 98451 04109

**ಬಾಡಿಗೆಗೆ ಇದೆ**
1. 2BHK ಗ್ರೌಂಡ್ ಫ್ಲೋರ್ ಮನೆ ಈಶ್ವರ್-ಗಣಪತಿ ದೇವಸ್ಥಾನದ ಹಿಂದೆ ವಿದ್ಯಾನಗರ.
2. 30x50 ಗ್ರೌಂಡ್ ಫ್ಲೋರ್ ಕಮರ್ಷಿಯಲ್ ಹಾಲ್, ಕಾಫೀ ಡೇ ಪಕ್ಕ ವಿದ್ಯಾನಗರ.
99725 77991

ಮುಖದ ಮೇಲಿರುವ ಕಪ್ಪುಕಲೆ, ಬಂಗು,ಮೊಡವೆಗಳು ಹೋಗುವ ಆಯುರ್ವೇದ ಕ್ರೀಮನ್ನು ನೇರವಾಗಿ ಮಾರಾಟ ಮಾಡಲು ಬೇಕಾಗಿದ್ದಾರೆ.
FULL TIME / PART TIME
ವೇತನ: 15000 + incentive
81057 81389

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶಾಪ್‌ನಲ್ಲಿ ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ವೀರ್ ಕ್ರಿಯೇಷನ್ಸ್
ವಿಜಯಲಕ್ಷ್ಮೀ ರೋಡ್, ಗುಪ್ತ ಗೋಲ್ಡ್‌ಪ್ಯಾಲೇಸ್ ಎದುರು, ದಾವಣಗೆರೆ.
98447 36261, 96630 08996

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ಚಿತ್ರದುರ್ಗ ಮತ್ತು ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಮ್ಯಾನೇಜರ್ಸ್
* ಡಾಟಾ ಎಂಟ್ರಿ ಎಕ್ಸಿಕ್ಯೂಟಿವ್ಸ್
* ಟೆಲಿಕಾಲಿಂಗ್ ಎಕ್ಸಿಕ್ಯೂಟಿವ್ಸ್.
76767 62286, 76767 62216

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ADMISSION OPEN 2022
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆಗಳು ಬಾಡಿಗೆ/ಲೀಸ್‌ಗೆ ಇವೆ**
ಲಕ್ಷ್ಮಿ ಲೇಔಟ್‌ನಲ್ಲಿರುವ ಎಸ್.ಎಸ್. ಹೈ-ಟೆಕ್ ಆಸ್ಪತ್ರೆ ಹತ್ತಿರ ಅರುಣಾ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್ ರೂಂ, 2 ಬಾತ್ ರೂಂ ಇರುವ ಮನೆಗಳು ಬಾಡಿಗೆಗೆ ಇವೆ.
96388 17967, 73380 43912

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**LADY TEACHERS WANTED**
Any Degree - 3 Posts
NTC - 3 Postes
Contact: Vidya Vikas Convent
Behind Aarykae Hospital Davanagere
99866 17235

**Walk-In-Interview**
We need a Female Tally Faculty
For Reputed Educational Institution
Intrested Candidates Can Send Their Resume By Mail or On Whatsapp Within 30.08.2022
Email ID:hardsoftdvg@gmail.com
97312 18567
Educational Qualification : B.Com/BBM/BBA/M.Com

# ಜಿಲ್ಲೆಯ ಪೊಲೀಸ್ ಇಲಾಖೆಗೆ ಕಿರೀಟವಾಗಿದ್ದ 'ತುಂಗಾ' ಅಂತರರಾಷ್ಟ್ರೀಯ ಶ್ವಾನ ದಿನದಂದೇ ಕೊನೆಯುಸಿರು





ದಾವಣಗೆರೆ, ಆ.26- 'ತುಂಗಾ' ಹೆಸರು ಹೇಳಿದರೆ ಸಾಕು ಆರೋಪಿಗಳ ಎದೆಯಲ್ಲಿ ನಡುಕು ಹುಟ್ಟಿಸುತ್ತಿದ್ದ ಪೊಲೀಸ್ ಶ್ವಾನ 'ತುಂಗಾ' ಅಂತರರಾಷ್ಟ್ರೀಯ ಶ್ವಾನ ದಿನವಾದ ಇಂದೇ ಕೊನೆಯುಸಿರೆಳೆದಿದೆ.

ದಾವಣಗೆರೆ ಜಿಲ್ಲೆಯ ಪೊಲೀಸ್ ಇಲಾಖೆಗೆ ಹೆಮ್ಮೆಯ ಕಿರೀಟವಾಗಿದ್ದ ಶ್ವಾನ ತುಂಗಾ, ಪೋಲಿಸರ ಪ್ರಕರಣಗಳನ್ನು ಬೇಧಿಸಿ ಆರೋಪಿಗಳನ್ನು ಕೊರಳಿನ ಕುಣಿಗೆ ತನಕ ಕೊಂಡೊಯ್ದು ಶ್ವಾನ ತುಂಗಾ ಡೆಂಗ್ಯೂಗೆ ತುತ್ತಾಗಿ ಇದೀಗ ನೆನಪು ಮಾತ್ರ.

ಜಿಲ್ಲಾ ಪೊಲೀಸ್ ಇಲಾಖೆಗೆ ಹೆಮ್ಮೆಯ ಕಿರೀಟವಾದ ಪೊಲೀಸ್ ಶ್ವಾನ 'ತುಂಗಾ' ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ನಿಸ್ಸೀಮಳಾಗಿದ್ದಳು.

ಇದೇ ತಿಂಗಳು 15 ರಂದು ಸ್ವಾತಂತ್ರ್ಯೋತ್ಸವ ದಿನದಂದು ಅದ್ದೂರಿ ಪ್ರದರ್ಶನ ನೀಡಿದ್ದ ತುಂಗಾ ಶ್ವಾನ ಜನರ ಗಮನ ಸೆಳೆದಿತ್ತು. ಬಳಿಕ ಇದೇ ತಿಂಗಳು 17 ರಂದು ಜ್ವರಕ್ಕೆ ತುತ್ತಾಗಿ ಆಹಾರ ಸೇವಿಸದೇ ಹೈರಾಣಾಗಿತ್ತು. ಇದರಿಂದ ಸಿಬ್ಬಂದಿ ದಾವಣಗೆರೆ ನಗರದ ಪಶು ಆಸ್ಪತ್ರೆಯ ಪಾಲಿ ಕ್ಲಿನಿಕ್‌ಗೆ ತೆಗೆದುಕೊಂಡು ಹೋದಾಗ ವೈದ್ಯರು ರಕ್ತ ಮಾದರಿಯನ್ನು ಪರೀಕ್ಷೆ ಮಾಡಿದ್ದು, ಬಿಳಿರಕ್ತ ಕಣಗಳು ಕೇವಲ 15 ಸಾವಿರಕ್ಕೆ ಇಳಿಕೆಯಾಗಿದ್ದರಿಂದ, ರಕ್ತವನ್ನು ಕೂಡ ಹಾಕಿಸಲಾಗಿತ್ತು. ಸ್ವಲ್ಪಮಟ್ಟಿಗೆ ಚೇತರಿಕೆ ಕಂಡಿದ್ದ ತುಂಗಾ ಶ್ವಾನ ಸ್ವಲ್ಪ ಹೊತ್ತಿಗೆ ಸಾವನ್ನಪ್ಪಿದೆ. ಮರಣೋತ್ತರ ಪರೀಕ್ಷೆ ನಡೆಸಿ ಪೊಲೀಸರಿಗೆ ತುಂಗಾಳ ಮೃತ ದೇಹವನ್ನು ಹಸ್ತಾಂತರ ಮಾಡಲಾಯಿತು.

ಕುಟುಂಬ ಸದಸ್ಯೆಯಾಗಿದ್ದ 'ತುಂಗಾ' ಅಗಲಿದ್ದು, ಜಿಲ್ಲಾ ಡಿಎಆರ್ ಗ್ರೌಂಡ್‌ನಲ್ಲಿ ಸಾರ್ವಜನಿಕ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಎಸ್ಪಿ ಸಿ.ಬಿ. ರಿಷ್ಯಂತ್ ಸೇರಿದಂತೆ ಹಲವು ಅಧಿಕಾರಿಗಳು ಅಂತಿಮ ದರ್ಶನ ಪಡೆದು, ಗೌರವ ಸಮರ್ಪಿಸಿದರು.

ತುಂಗಾಳ ಅಗಲಿಕೆಯಿಂದ ಪೊಲೀಸ್ ಇಲಾಖೆ ಕಂಬನಿ ಮಿಡಿದಿದ್ದು, ಅತ್ಯಂತ ಚಾಣಾಕ್ಷ ತನದಿಂದ ಪ್ರಕರಣಗಳನ್ನು ಭೇದಿಸುತ್ತಿದ್ದ ಈ ಶ್ವಾನ ಈಗ ನೆನಪು ಮಾತ್ರ.

**ಸಿಂಹಸ್ವಪ್ನವಾಗಿದ್ದ ತುಂಗಾ :** ಏ.16, 2010 ರಂದು ಜನಿಸಿದ್ದ ಈ ಶ್ವಾನವು ಡಾಬರ್‌ಮನ್ ಫಿಂಚರ್ ತಳಿಯದ್ದಾಗಿದ್ದು, ಬೆಂಗಳೂರಿನ ಆಡುಗೋಡಿಯಲ್ಲಿ ತರಬೇತಿ ಪಡೆದ ತುಂಗಾ ದಾವಣಗೆರೆ ಜಿಲ್ಲಾ ಪೊಲೀಸ್ ಶ್ವಾನದಳದ ಅಪರಾಧ ವಿಭಾಗಕ್ಕೆ ಜು. 2, 2011 ರಂದು ಸೇವೆಗೆ ಸೇರಿದ್ದು, ಅಪರಾಧ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿತ್ತು. ಈ ತುಂಗಾ ಶ್ವಾನವು 650 ಕ್ಕೂ ಹೆಚ್ಚು ಪ್ರಕರಣಗಳಿಗೆ ಹಾಜರಾಗಿದ್ದು, ಅದರಲ್ಲಿ 106 ಪ್ರಕರಣಗಳನ್ನು ಭೇದಿಸಿರುತ್ತದೆ. ಅದರಲ್ಲಿ 71 ಕೊಲೆ ಪ್ರಕರಣ ಮತ್ತು 35 ಕಳ್ಳತನ ಮತ್ತು ದರೋಡೆ ಪ್ರಕರಣಗಳನ್ನು ಭೇದಿಸಿದೆ.

ತುಂಗಾ ಇಡೀ ಭಾರತದಲ್ಲೇ ಬೆರಗು ಮೂಡಿಸಿದ ಶ್ವಾನ ಕೂಡ ಹೌದು. ತುಂಗಾ ದಾವಣಗೆರೆ ಪೊಲೀಸ್ ಇಲಾಖೆಯಲ್ಲಿ 12 ವರ್ಷಗಳ ಕಾಲ ಸೇವೆ ಸಲ್ಲಿಸಿದೆ. ಪೊಲೀಸರಿಗೆ ಅಚ್ಚುಮೆಚ್ಚಿನ ಶ್ವಾನವಾಗಿತ್ತು. ಇದು ಅಪರಾಧಿಗಳ ವಾಸನೆ ಹಿಡಿದು ಸುಮಾರು 13 ಕಿಲೋಮೀಟರ್ ದೂರ ಕ್ರಮಿಸಿ ಅಪರಾಧಿಗಳನ್ನು ಹಿಡಿದ ಕೀರ್ತಿ ತುಂಗಾಗಿದೆ.

**ತುಂಗಾ ಶ್ವಾನಕ್ಕೆ ಬಂದಂತಹ ಪ್ರಶಂಸನೆ :** 2020 ರಲ್ಲಿ ಜಿಲ್ಲಾ ಪೊಲೀಸ್ ಕಛೇರಿ ದಾವಣಗೆರೆಯಲ್ಲಿ ಎಡಿಜಿಪಿ ಅಮರ ಕುಮಾರ್ ಪಾಂಡೆ ಸನ್ಮಾನಿಸಿ, ಶ್ಲಾಘನೀಯ ಪತ್ರವನ್ನು ನೀಡಿದ್ದಾರೆ.

2020 ರಲ್ಲಿ ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 74ನೇ ಸ್ವಾತಂತ್ರ್ಯ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಸನ್ಮಾನಿಸಿದ್ದಾರೆ.

2021 ರಲ್ಲಿ ದಾವಣಗೆರೆ ನಗರದಲ್ಲಿ ನಡೆದ 'ಆಜಾದಿ ಕಾ ಅಮೃತ್ ಮಹೋತ್ಸವ್' ಕಾರ್ಯಕ್ರಮದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ದಾವಣಗೆರೆ ಮತ್ತು ಮಾನ್ಯ ಪೊಲೀಸ್ ಅಧೀಕ್ಷರು, ದಾವಣಗೆರೆ ಜಿಲ್ಲೆ ಹಾಗೂ ದಾವಣಗೆರೆ ನಗರ ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕರು, ಸನ್ಯಾಸಿ ಪ್ರಶಂಸನಾ ಪತ್ರ ನೀಡಿದ್ದಾರೆ.

**ತುಂಗಾ ಶ್ವಾನ ಬೇಧಿಸಿದ ಪ್ರಮುಖ ಪ್ರಕರಣಗಳು :** ಜ. 24, 2018 ರ ನ್ಯಾಮತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ತುಂಗಾ ಶ್ವಾನವು ಕೃತ್ಯ ನಡೆದ ಸ್ಥಳದಿಂದ ಕೆಂಪು ಹಂಚಿನ ಮತ್ತು ಬೀರುವಿನ ವಾಸನೆ ಗ್ರಹಿಸಿಕೊಂಡು ಮನೆಯ ಹೊರಗೆ ಮತ್ತು ಒಳಗೆ ಸುತ್ತಾಡಿ ಜನರ ಮಧ್ಯೆ ಇದ್ದ ವೀರಪ್ಪನ ಮಗನಾದ ಶಿವಕುಮಾರನನ್ನು ಗುರುತಿಸಿ ಆರೋಪಿಯನ್ನು ಪತ್ತೆ ಮಾಡಿದೆ.

ಅ.27, 2018 ರ ಹರಿಹರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ತುಂಗಾ ಶ್ವಾನವು ಕೃತ್ಯ ನಡೆದ ಸ್ಥಳದಿಂದ ವಾಸನೆ ಗ್ರಹಿಸಿಕೊಂಡು 3 ಕಿ.ಮೀ ದೂರ ಸಾಗಿ ಮಹಾತ್ಮ ಗಾಂಧಿ ಕೊಳಗೆರೆ ಪ್ರದೇಶದಲ್ಲಿರುವ ಆರೋಪಿ ಹುಚ್ಚ ಅರುಣನ ಮನೆ ಗುರುತಿಸಿದೆ.

ಜು. 10, 2019 ರ ಬಸವಾಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ತುಂಗಾ ಶ್ವಾನವು ಕೃತ್ಯ ನಡೆದ ಸ್ಥಳದಿಂದ ವಾಸನೆ ಗ್ರಹಿಸಿಕೊಂಡು ಸೂಳೆಕೆರೆ ಕೆಳಗೆ ಇಳಿದು 11 ಕಿ.ಮೀ ದೂರ ಸಾಗಿ ಕಾಶಿಪುರ ತಾಂಡಾದಲ್ಲಿದ್ದ ಚೇತನ್ ಎಂಬ ಆರೋಪಿಯನ್ನು ಪತ್ತೆ ಮಾಡಿದೆ.

ಮೇ 19, 2019 ರ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ತುಂಗಾ ಶ್ವಾನವು ಕೃತ್ಯ ನಡೆದ ಸ್ಥಳದಿಂದ ವಾಸನೆ ಗ್ರಹಿಸಿಕೊಂಡು ಮನೆಯ ಸುತ್ತಮುತ್ತ ತಿರುಗಾಡಿ ಕಕ್ಕರಗೊಳ್ಳದಲ್ಲಿರುವ ರೇವಣಸಿದ್ದಪ್ಪ ಎಂಬ ಆರೋಪಿಯ ಮನೆಯನ್ನು ಗುರುತಿಸಿ, ಆರೋಪಿಯನ್ನು ಪತ್ತೆ ಮಾಡಿದೆ.

ಜೂ. 24, 2022 ರ ಹೊನ್ನಾಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ತುಂಗಾ ಶ್ವಾನವು ಕೃತ್ಯ ನಡೆದ ಸ್ಥಳದಿಂದ ವಾಸನೆ ಗ್ರಹಿಸಿಕೊಂಡು ಮನೆಯ ಸುತ್ತಮುತ್ತ ತಿರುಗಾಡಿ ನಂತರ 100 ಮೀಟರ್ ದೂರದಲ್ಲಿ ಇರುವ ಹರೀಶ್ ಎಂಬಾತನ ಮನೆಯ ಬಚ್ಚಲು ಮನೆಗೆ ಹೋಗಿ ಆರೋಪಿಯ ಪ್ರಮುಖ ಸುಳಿವು ನೀಡಿದೆ.

## 'ಮಿಸ್ಟರ್ ಅಂಡ್ ಮಿಸ್ ದಾವಣಗೆರೆ' ಸೀಸನ್-4 ಗ್ರ್ಯಾಂಡ್ ಫಿನಾಲೆ ನಾಳೆ

ದಾವಣಗೆರೆ, ಆ. 26- ಖುಷಿ ಈವೆಂಟ್ಸ್ ವತಿಯಿಂದ ಸತತ ನಾಲ್ಕನೇ ಬಾರಿಗೆ ಆ. 28 ರಂದು ನಗರದ ಹೊರ ವಲಯದ ಹೊಸ ಕುಂದುವಾಡ ಬಳಿ ಇರುವ ಬೈ ಪಾಸ್ ಪಕ್ಕದ ಸುಶೀ ಸಮುದಾಯ ಭವನದಲ್ಲಿ 'ಮಿಸ್ಟರ್ ಅಂಡ್ ಮಿಸ್ ದಾವಣಗೆರೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೈಪ್ ಆಪ್ ಮುಖ್ಯಸ್ಥ ಶಿವ ರತನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಫಿಟ್ನೆಸ್ ಕೋಚ್ ಅರುಣ್ ಭಟ್ಟಾಚಾರ್ಯ, ಫ್ಯಾಷನ್ ಛಾಯಾಗ್ರಾಹಕ ಫರಾಜ್ ಅಹಮದ್, ನಟಿ ಹರಿತ್ ಷಾ, ಲೋಪಮುದ್ರ, ಚೇತನ್ ಆಗಮಿಸಲಿದ್ದಾರೆ ಎಂದು ಹೇಳಿದರು.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ 300 ಅಭ್ಯರ್ಥಿಗಳ ಪೈಕಿ ಅಂತಿಮ ಸುತ್ತಿಗೆ ಕೇವಲ ಜ್ಯೂನಿಯರ್ ವಿಭಾಗದಿಂದ 30 ಮತ್ತು ಸೀನಿಯರ್ ವಿಭಾಗದಿಂದ 40 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಆಯ್ಕೆ ನಂತರ ಒಂದು ತಿಂಗಳ ತರಬೇತಿ ನಡೆಸಿ, ಹಲವು ಟಾಸ್ಕ್ ಗಳನ್ನು ನೀಡಲಾಗಿತ್ತು ಎಂದರು.

ಸತತ ಒಂದು ತಿಂಗಳ ಕಾಲ ಆಯ್ಕೆ ಸ್ಪರ್ಧಿಗಳಿಗೆ ಮಾಡೆಲಿಂಗ್ ಕ್ಷೇತ್ರದ ಮಾಹಿತಿಯನ್ನು ಅಂತರ ರಾಷ್ಟ್ರೀಯ ಮಟ್ಟದ ಖ್ಯಾತಿ ಪಡೆದಿರುವ ನಗರದ ಸೋನು ಸಿಂಗ್ ನೀಡಿದ್ದಾರೆ. ವಿನಯ್ ಪ್ರಭಾಕರ್, ಧನುಶ್ರೀ ಅವರು ಸ್ಪರ್ಧಿಗಳನ್ನು ಅಂತಿಮ ಸುತ್ತಿಗೆ ತಯಾರು ಮಾಡಿದ್ದಾರೆಂದರು.

**ಇಂದು ಸಾಮೂಹಿ ನೃತ್ಯ ಪ್ರದರ್ಶನ :** ಭಾರತ ಒಕ್ಕೂಟದೊಂದಿಗೆ ಮೈಸೂರು ಮಹಾರಾಜರು ಪ್ರಥಮ ಬಾರಿಗೆ ಸಹಿ ಮಾಡಿದಂತಹ ಐತಿಹಾಸಿಕ ಘಟನೆ ಬಗ್ಗೆ ಜಾಗೃತಿ ಮೂಡಿಸಲು ಕನ್ನಡ ಭಾಷೆಯ ಏಕತೆ, ಸಂಸ್ಕೃತಿ ಬಿಂಬಿಸುವ ಸಾಮೂಹಿಕ ನೃತ್ಯ ರೂಪಕವನ್ನು ಖುಷಿ ಸ್ಪರ್ಧಾ ತಂಡದಿಂದ ನಗರದ ಜಯದೇವ ವೃತ್ತದಲ್ಲಿ ಇಂದು (ಆ. 27) ಬೆಳಿಗ್ಗೆ 8 ಕ್ಕೆ ಏರ್ಪಡಿಸಲಾಗಿದೆ ಎಂದು ಶಿವರತನ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಎಸ್‌ಎನ್ ಮಾಲೀಕ ಸಂತೋಷ್ ಏಕಬೋಟೆ, ಸ್ಟೆಟ್ ಫಿಟ್ನೆಸ್ ಮಾಲೀಕ ರೂಪಿತ್ ನಾಗರಾಜ್, ಹ್ಯಾಪಿ ಇವೆಂಟ್ ಮಾಲೀಕ ಕಾರ್ತಿಕ್ ಹಿರೇಮಠ್, ಗ್ರೀನ್ ಪಾರ್ಕ್ ಹೋಟೆಲ್ ಮಾಲೀಕ ನಿಖಿತ್ ಶೆಟ್ಟಿ, ಕಾರ್ಯಕ್ರಮದ ನಿರ್ದೇಶಕ ಎಂ. ಮಯೂರ್, ಗ್ರೀನಿ ಕಂಪನಿ ಮಾಲೀಕ ಚೇತನ್ ಕುಮಾರ್, ನವೀನ್, ಮನೋಹರ್, ಸುಹೇಲ್ ಮತ್ತಿತರರು ಉಪಸ್ಥಿತರಿದ್ದರು.

## ನೀಲಾನಹಳ್ಳಿಯ ಜೈನ್ ಮಂದಿರದಲ್ಲಿ ಅಮಾವಾಸ್ಯೆ ಪೂಜೆ

ದಾವಣಗೆರೆ ತಾಲ್ಲೂಕಿನ ನೀಲಾನಹಳ್ಳಿ ಗ್ರಾಮದ ಭಗವಾನ್ ಶ್ರೀ 1008 ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ಅಮಾವಾಸ್ಯೆ ಪ್ರಯುಕ್ತ ಇಂದು ಭಗವಾನ್ ಶ್ರೀ 1008 ಮುನಿಸುವ್ರತ ತೀರ್ಥಂಕರರಿಗೆ ಬೆಳಿಗ್ಗೆ ನಿತ್ಯ ಪೂಜೆ, ಆರಾಧನೆ, ಕಳಸಾಭಿಷೇಕ ಮತ್ತು ಪಾಲಕಿ ಉತ್ಸವ ನಡೆಯುವವು.

## ಫೈಜರ್ ವಿರುದ್ಧ ಮೊಡೆರ್ನ ಪ್ರಕರಣ

ವಾಷಿಂಗ್ಟನ್, ಆ. 26 – ಫೈಜರ್ ಹಾಗೂ ಜರ್ಮನಿಯ ಬಯಾನ್‌ಟೆಕ್ ಕಂಪನಿಗಳು ಲಸಿಕೆ ಕುರಿತ ತನ್ನ ಪೇಟೆಂಟ್ ನಕಲು ಮಾಡಿವೆ ಎಂದು ಆರೋಪಿಸಿ ಮೊಡೆರ್ನ ಪ್ರಕರಣ ದಾಖಲಿಸಿದೆ.

ಫೈಜರ್ ಹಾಗೂ ಬಯಾನ್‌ಟೆಕ್ ಕಂಪನಿಗಳು ಹಲವಾರು ವರ್ಷಗಳಿಂದ ಸ್ಪೈಕ್‌ವ್ಯಾಕ್ಸ್ ಎಂಬ ಲಸಿಕೆಯ ಪೇಟೆಂಟ್‌ಗಳನ್ನು ನಕಲು ಮಾಡುತ್ತಿವೆ ಎಂದು ಮೊಡೆರ್ನ ಆರೋಪಿಸಿದೆ.

## 'ಯೋಗಾಥಾನ್' ಯಶಸ್ವಿಗೆ ಬೆಂಬಲಿಸಿ ಪೂರ್ವಭಾವಿ ಸಭೆ

ದಾವಣಗೆರೆ, ಆ.26- ಇಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಛೇರಿಯಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಜಿಲ್ಲೆಯಲ್ಲಿ ಯೋಗಾಥಾನ್ 2022 ವಿಶ್ವ ದಾಖಲೆ ಪ್ರಯತ್ನ ಕುರಿತು ಕರೆಯಲಾದ ಸಭೆಯಲ್ಲಿ ಜಿಲ್ಲೆಯಿಂದ 15000 ಯೋಗಾಸಕ್ತರನ್ನು ಸೇರಿಸುವ ಮೂಲಕ ವಿಶ್ವದಾಖಲೆ ನಿರ್ಮಿಸಲು ಬೇಕಾದ ವ್ಯವಸ್ಥೆಗಳ ವಿಷಯ ಚರ್ಚಿಸಿದ ಯುವ ಸಬಲೀಕರಣ ಇಲಾಖೆಯ ಉಪನಿರ್ದೇಶಕಿ ಸುಚೇತನ ಎನ್. ನಮ್ಮಲ್ಲಿ ಕ್ರೀಡಾಂಗಣ ಸ್ಥಳದ ಕೊರತೆ ಕಾರಣ ಇರುವುದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವ ಮೂಲಕ ಬಾಪೂಜಿ ಹೆಲಿಪ್ಯಾಡ್ ಸ್ಥಳ ನೀಡುವಂತೆ ಆಡಳಿತ ಮಂಡಳಿಗೆ ಮನವಿ ಸಲ್ಲಿಸಲು ವಿನಂತಿಸಿದರು.

ವೈಸಿಬಿ ಮಾನ್ಯತೆ ಪಡೆದ ಯೋಗ ಶಿಕ್ಷಕರು ಜಿಲ್ಲೆಯಲ್ಲಿ 10 ಜನ ಇದ್ದು, ಅವರ ನಾರ್ಗದರ್ಶನದಲ್ಲಿ ಶಾಲಾ- ಕಾಲೇಜು ಮಕ್ಕಳಿಗೆ ತರಬೇತಿ ನೀಡುವಂತೆ ಅವರು ವಿನಂತಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಶಂಕರಗೌಡ ಮಾತನಾಡಿ, ಜಿಲ್ಲೆಯಲ್ಲಿ ಇನ್ನೂ ನೋಂದಣಿ ಮಾಡದಿರುವ ಕಾಲೇಜುಗಳನ್ನು ಸಂಪರ್ಕಿಸಿ ನೋಂದಣಿ ಮಾಡಿಸುಂತೆ ತಿಳಿಸಿ ಎಂದು ಹೇಳಿದರು.

ಜಿಲ್ಲಾ ಯೋಗ ಒಕ್ಕೂಟದ ಕಾರ್ಯದರ್ಶಿ ವಾಸುದೇವ್ ರಾಯ್ಕರ್ ಮಾತನಾಡಿ, ನಮ್ಮ ಒಕ್ಕೂಟ 'ಯೋಗಾಥಾನ್' ಯಶಸ್ವಿಗೆ ಸದಾ ಸಿದ್ದವಿದ್ದು ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಯೋಗಾಥಾನ್‌ನಲ್ಲಿ ಭಾಗವಹಿಸುವ ಮಕ್ಕಳಿಗೆ ಆಹಾರ, ನೀರು, ಕೊರತೆಯಾಗದಂತೆ ನಾವು ವ್ಯವಸ್ಥೆ ಮಾಡುತ್ತೇವೆಂದು ತಿಳಿಸಿದರು.

ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಶಿವರಾಜ್ ಮಾತನಾಡಿ, ನಮ್ಮ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜು ಪ್ರಾಚಾರ್ಯರಿಗೂ ಈಗಾಗಲೇ ನಿರ್ದೇಶನ ನೀಡಿದ್ದು, ನಗರ ವ್ಯಾಪ್ತಿಯಲ್ಲಿ ಸುಮಾರು 3000 ಕ್ಕೂ ಹೆಚ್ಚು ಮಕ್ಕಳನ್ನು ತರಬೇತಿ ನೀಡುವ ಮೂಲಕ 'ಯೋಗಾಥಾನ್' ವಿಶ್ವದಾಖಲೆ ಪ್ರಯತ್ನಕ್ಕೆ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದರು.

ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆ ಜಿಲ್ಲಾ ಸಂಯೋಜಕ ಪರುಶುರಾಮ್ ಎನ್. ಜೈಮುನಿ ಕೆ., ಪ್ರಾಚಾರ್ಯ ಕರಿಸಿದ್ದಪ್ಪ, ಸಾರ್ವಜನಿಕ ಶಿಕ್ಷಣ ಇಲಾಖೆ ವಲಯ ಅಧಿಕಾರಿ ಲೋಕಪ್ಪ ಸೇರಿದಂತೆ 15 ಕ್ಕೂ ಹೆಚ್ಚು ಕಾಲೇಜಿನ ಪ್ರಾಚಾರ್ಯರು ಸಭೆಯಲ್ಲಿ ಭಾಗವಹಿಸಿ ಸಲಹೆ ನೀಡಿದರು.

## ಇಂದು 'ಕೌರವ', 'ಶಿಡ್ಲು' ಪತ್ರಿಕೆಗಳ ದಾವಣಗೆರೆ ಆವೃತ್ತಿ ಬಿಡುಗಡೆ

ದಾವಣಗೆರೆ, ಆ. 26- 'ಕೌರವ' ಮತ್ತು 'ಶಿಡ್ಲು' ಪತ್ರಿಕೆಗಳ ದಾವಣಗೆರೆ ಆವೃತ್ತಿ ಬಿಡುಗಡೆ ಸಮಾರಂಭ ನಾಳೆ ದಿನಾಂಕ 27 ರಂದು ಬೆಳಿಗ್ಗೆ 11 ಗಂಟೆಗೆ ನಗರದ ವಿರಕ್ತಮಠದ ಆವರಣದಲ್ಲಿ ನಡೆಯಲಿದೆ ಎಂದು 'ಶಿಡ್ಲು' ಸಂಪಾದಕ ಆರ್.ಜಿ. ಮಹಾನುಭಾವಿಮಠ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳು : ಅಶೋಕ್ ಕುಮಾರ್, ವಿಶ್ವನಾಥ ಪಿ. ಮುದಜ್ಜಿ, ರವೀಂದ್ರ ಮಲ್ಲಾಪುರ, ಎಸ್.ಬಿ. ಮಠದ್, ಐ. ಬಸವರಾಜ್, ಇ.ಎಂ. ಮಂಜುನಾಥ, ಮಂಜುನಾಥ ಗೌರಕ್ಕಳವರ, ಆರ್.ಎಸ್. ತಿಪ್ಪೇಸ್ವಾಮಿ, ಯಶವಂತರಾವ್ ಜಾಧವ್, ಇಂದ್ರಪ್ಪ, ಲೋಕಿಕೆರೆ ನಾಗರಾಜ್, ಡಿ.ಪಿ. ಬಸವರಾಜ್, ಜಿ. ಗೋವಿಂದರಾಜ್, ಮಹಾಂತೇಶ್ ವಿ. ಒಣರೊಟ್ಟಿ, ಹೆಚ್.ಸಿ. ಶ್ರೀಧರ ಪಾಟೀಲ್, ಕೆ. ಚಂದ್ರಪ್ಪ, ಪ್ರೊ. ತೇಜಸ್ವಿ ಕಟ್ಟಿಮನಿ, ಹೆಚ್.ಬಿ. ಅಭಿಷೇಕ್ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಶಿಡ್ಲು ಪತ್ರಿಕೆ ಸಹ ಸಂಪಾದಕ ಎಸ್.ಜಿ. ಮಹಾನುಭಾವಿಮಠ, ಪತ್ರಕರ್ತ ಟಿ.ಜಿ. ಶಿವಮೂರ್ತಿ ಉಪಸ್ಥಿತರಿದ್ದರು.

## ಪಿಒಪಿ ಗಣಪತಿ ಇಟ್ಟರೆ 10 ಸಾವಿರ ದಂಡ ; ನಗರ ಪಾಲಿಕೆ ಎಚ್ಚರಿಕೆ

ದಾವಣಗೆರೆ, ಆ.26- ಗಣೇಶ ಮೂರ್ತಿಗಳನ್ನು ಜೇಡಿ ಮಣ್ಣಿನಿಂದ ತಯಾರಿಸಿ, ಬಣ್ಣ ರಹಿತ ಅಥವಾ ನೈಸರ್ಗಿಕ ಬಣ್ಣ ಲೇಪಿತ ಮೂರ್ತಿಗಳನ್ನು ಮಾತ್ರ ಮಾರಾಟ ಮಾಡಬೇಕು. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮಹಾನಗರ ಪಾಲಿಕೆ ಎಚ್ಚರಿಸಿದೆ.

ಒಂದು ವೇಳೆ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ತಯಾರಿಸಿದ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರೆ ಅದನ್ನು ವಶಪಡಿಸಿಕೊಳ್ಳಲಾಗುವುದು ಮತ್ತು 10 ಸಾವಿರ ರೂ.ಗಳ ದಂಡ ವಿಧಿಸಲಾಗುವುದು. ಅರಿಶಿಣ ಅಥವಾ ಜೇಡಿ ಮಣ್ಣಿನಿಂದ ತಯಾರಿಸಿದ ಗಣೇಶ ಮೂರ್ತಿಗಳನ್ನು ಮಾತ್ರ ಖರೀದಿಸುವ ಮೂಲಕ ಪರಿಸರ ಸ್ನೇಹಿ ಗಣೇಶೋತ್ಸವ ಆಚರಣೆ ಮಾಡಬೇಕು ಎಂದು ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕನ್ನಡ ಕುವರ, ಕುವರಿ ಪ್ರಶಸ್ತಿ ಪ್ರದಾನ ಸಮಾರಂಭ

ದಾವಣಗೆರೆ, ಆ. 26- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 27 ಹಾಗೂ 28ರಂದು ಕನ್ನಡ ಕುವರ-ಕುವರಿ, ಕನ್ನಡ ಕೌಸ್ತುಭ, ಸರಸ್ವತಿ ಪುರಸ್ಕಾರ ಜಿಲ್ಲಾ ಮತ್ತು ರಾಜ್ಯ ಪ್ರಶಸ್ತಿಗಳ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನಾಳೆ 27ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ನಡೆಯುವ ಕನ್ನಡ ಕುವರ, ಕನ್ನಡ ಕುವರಿ ಜಿಲ್ಲಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಉದ್ಘಾಟಿಸಲಿದ್ದಾರೆ. ಸುಗಮ ಸಂಗೀತ್ ಪರಿಷತ್ ರಾಜ್ಯಾಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಗರ ಶ್ರೀನಿವಾಸ ಉಡುಪ, ಜಸ್ಟಿನ್ ಡಿಸೌಜ, ಮೋತಿ ಪರಮೇಶ್ವರ್ ಉಪಸ್ಥಿತರಿರಲಿದ್ದಾರೆ ಎಂದರು.

28ರ ಭಾನುವಾರ ನಡೆಯಲಿರುವ ಕನ್ನಡ ಕೌಸ್ತುಭ, ಸರಸ್ವತಿ ಪುರಸ್ಕಾರ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಷಿ ಉದ್ಘಾಟಿಸಲಿದ್ದು, ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ.ಜಿ.ಎಲ್. ಹೆಗಡೆ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಯಕ್ಷಗಾನ ಸಾಹಿತಿ ಜಯಲಕ್ಷ್ಮಿ ಕಾರಂತ ಅವರಿಗೆ ಸರಸ್ವತಿ ಸಿರಿ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ, ಶ್ರೀ ಸಿದ್ಧಗಂಗಾ ಪ.ಪೂ. ಕಾಲೇಜು ನಿರ್ದೇಶಕ ಡಾ.ಜಯಂತ್ ಡಿ.ಎಸ್. ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.

27ರ ಸಂಜೆ 6 ಗಂಟೆಗೆ ಯಕ್ಷ ಮೌಕ್ತಿಕ ಮಹಿಳಾ ಕೂಟ ಮಂಗಲ್ಪಾಡಿ ಮಹಿಳಾ ಕಲಾವಿದರಿಂದ ರಾವಣಾಂತರಂಗ ಪೌರಾಣಿಕ ಪ್ರಸಂಗದ ಯಕ್ಷಗಾನ ನಡೆಯಲಿದೆ. ಪತ್ರಿಕಾಗೋಷ್ಠಿಯಲ್ಲಿ ಕೆ.ಹೆಚ್. ಮಂಜುನಾಥ್, ಜಿ.ಬಿ. ಲೋಕೇಶ್, ಜ್ಯೋತಿ ಗಣೇಶ ಶೆಣೈ, ಹೇಮಾ ಶಾಂತಪ್ಪ ಪೂಜಾರಿ, ಬಿ.ಶಾಂತಪ್ಪ ಪೂಜಾರಿ, ವಸಂತಿ ಮಂಜುನಾಥ್, ಬೇಳೂರು ಸಂತೋಷ್ ಕುಮಾರ ಶೆಟ್ಟಿ ಉಪಸ್ಥಿತರಿದ್ದರು.

## ಎವಿಕೆ ಕಾಲೇಜಿನಲ್ಲಿ ಇಂದು ದೇಸೀ ಕಲರವ

ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ವತಿಯಿಂದ ಇಂದು ಬೆಳಿಗ್ಗೆ 11 ಕ್ಕೆ ದೇಸೀ ಕಲರವ ನಡೆಯಲಿದೆ. ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕರಿಂದ ವಿವಿಧ ರಾಜ್ಯಗಳ ನೃತ್ಯ, ಸಾಂಪ್ರದಾಯಿಕ ವೇಷಭೂಷಣ, ಜಾನಪದ ನೃತ್ಯ ಸೇರಿ, ವಿವಿಧ ಮನರಂಜನೀಯ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಳ್ಳಲಿವೆ.

## ನಗರದಲ್ಲಿ ಇಂದು ಶ್ರಾವಣದ ಭಜನೆ

ಯಲ್ಲಮ್ಮ ನಗರ 3ನೇ ಮೇನ್ 8ನೇ ಕ್ರಾಸ್‌ನಲ್ಲಿರುವ ಓಂ ಶ್ರೀ ಗುರು ಗೋವಿಂದ ಶಿವಯೋಗೀಶ್ವರ ಮತ್ತು ಓಂ ಶ್ರೀ ಶಿಶುನಾಳ ಶರೀಫ ಶಿವಯೋಗೀಶ್ವರರ ಪುಣ್ಯಾಶ್ರಮದಲ್ಲಿ ಇಂದು ಭಜನಾ ಕಾರ್ಯಕ್ರಮ ಇಂದಿನಿಂದ ಪ್ರಾರಂಭವಾಗುತ್ತಿದೆ. ನಾಳೆ ಭಾನುವಾರ ಬೆಳಿಗ್ಗೆ 8ಕ್ಕೆ ಶ್ರೀ ಶಿವಯೋಗಿಯವರ ಭಾವಚಿತ್ರದ ಮೆರವಣಿಗೆ, ಭಜನೆ ನಡೆಯುವುದು. ನಂತರ ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

## ಫುಟ್‌ಬಾಲ್ : ನಿರ್ಬಂಧ ತೆರವು

ಜೂರಿಚ್, ಆ. 26 – ಅಖಿಲ ಭಾರತ ಫುಟ್‌ಬಾಲ್ ಒಕ್ಕೂಟ (ಎ.ಐ.ಎಫ್.ಎಫ್.)ದ ಮೇಲೆ ಹೇರಲಾಗಿದ್ದ ನಿರ್ಬಂಧವನ್ನು ವಿಶ್ವ ಫುಟ್‌ಬಾಲ್ ಸಂಸ್ಥೆಯಾದ ಫಿಫಾ ತೆರವುಗೊಳಿಸಿದೆ. ಇದರಿಂದ ಮುಂಬರುವ ಅಕ್ಟೋಬರ್‌ನಲ್ಲಿ ಭಾರತದಲ್ಲಿ ನಡೆಯಬೇಕಿದ್ದ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಪಂದ್ಯಾವಳಿಗೆ ಇದ್ದ ಅಡ್ಡಿಗಳು ತೆರವಾಗಿದ್ದವು.

ಎ.ಐ.ಎಫ್.ಎಫ್. ಮೇಲೆ ಮೂರನೆಯವರ ಅನಗತ್ಯ ಪ್ರಭಾವ ಆಗಿದ್ದು, ಇದು ನಿಯಮಗಳ ಉಲ್ಲಂಘನೆ ಎಂದು ಕಳೆದ ಆಗಸ್ಟ್ 15ರಂದು ಫಿಫಾ ನಿರ್ಬಂಧ ಹೇರಿತ್ತು.

## ಆಜಾದ್ ರಾಜೀನಾಮೆಗೆ ತರಾಟೆ

(5ನೇ ಪುಟದಿಂದ) ಹೆಚ್ಚು ಗೌರವ ಪಡೆದಿದ್ದ ವ್ಯಕ್ತಿಯೇ ಪಕ್ಷಕ್ಕೆ ದ್ರೋಹ ಎಸಗಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಕುತ್ಸಿತ ವೈಯಕ್ತಿಕ ವಾಗ್ದಾಳಿ ನಡೆಸಿರುವುದು ಅವರ ಬಣ್ಣ ಬಯಲು ಮಾಡಿದೆ ಎಂದು ರಮೇಶ್ ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಇಡೀ ಕಾಂಗ್ರೆಸ್ ಸಂಘಟನೆ ಬೆಲೆ ಏರಿಕೆ, ನಿರುದ್ಯೋಗ ಹಾಗೂ ಧ್ರುವೀಕರಣದ ವಿರುದ್ಧ ಹೋರಾಟ ನಡೆಸುತ್ತಿರುವಾಗ ಆಜಾದ್ ರಾಜೀನಾಮೆ ನೀಡಿರುವುದು ದುರದೃಷ್ಟಕರ ಎಂದವರು ತಿಳಿಸಿದ್ದಾರೆ.

## ಪ್ರಿಯಾಂಕ್ ವಿವಾದಾತ್ಮಕ ಹೇಳಿಕೆಗೆ ಬಿಜೆಪಿ ಮಹಿಳಾ ಮೋರ್ಚಾ ಖಂಡನೆ

ದಾವಣಗೆರೆ, ಆ. 26- ಚಿತ್ತಾಪುರ ಶಾಸಕ ಪ್ರಿಯಾಂಕ ಖರ್ಗೆ ನೀಡಿರುವ ಮಹಿಳೆಯ ಬಗ್ಗೆ ವಿವಾದಾತ್ಮಕ ಹೇಳಿಕೆಗೆ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಖಂಡಿನೆ ವ್ಯಕ್ತಪಡಿಸಿದ್ದು, ಈ ಕೂಡಲೇ ಕ್ಷಮಾಪಣೆ ಕೇಳದಿದ್ದರೆ ಚಿತ್ತಾಪುರ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ಮಹೇಶ್ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಉದ್ಯೋಗ ಬೇಕಿದ್ದರೆ ಯುವತಿಯರು ಮಂಚ ಹತ್ತಬೇಕಾಗುತ್ತದೆ. ಇದೊಂದು ಲಂಚದ ಸರ್ಕಾರ ಎಂದು ಮಹಿಳೆಯರ ಬಗ್ಗೆ ಅಗೌರವ ತೋರಿದ್ದಾರೆ. ಭಾರತದಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನವಿದೆ. ಅವರ ಬಗ್ಗೆ ಲಘುವಾಗಿ ಮಾತನಾಡುವುದು ಸಲ್ಲದು ಎಂದರು.

ಪುತ್ರನಿಗೆ ಉತ್ತಮ ಸಂಸ್ಕಾರ ನೀಡುವಲ್ಲಿ ರಾಜಕೀಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ಎಡವಿದ್ದಾರೆ ಎಂಬುದು ಪ್ರಿಯಾಂಕ ಖರ್ಗೆ ಮಾತಿನಿಂದಲೇ ಗೊತ್ತಾಗುತ್ತದೆ. ಮಹಿಳೆಯರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಪ್ರಿಯಾಂಕ ಖರ್ಗೆ ಕ್ಷಮಾಪಣೆ ಕೇಳಬೇಕು ಎಂದು ಒತ್ತಾಯಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮ ದಿನದ ಅಂಗವಾಗಿ ಸೆ.17 ರಿಂದ ಅಕ್ಟೋಬರ್ 7 ರವರೆಗೆ ಸೇವಾ ಸಮರ್ಪಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಈಶ್ವರ ದೇವಸ್ಥಾನದಲ್ಲಿ ಅಭಿಷೇಕ, ಸ್ವಚ್ಛತಾ ಕಾರ್ಯಕ್ರಮ, ಸಸಿ ನೆಡುವುದು, ಆರೋಗ್ಯ ತಪಾಸಣೆ, ಹೆಣ್ಣು ಮಕ್ಕಳಿಗೆ ಉಡಿ ತುಂಬುವ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪುಷ್ಪಾ ವಾಲಿ, ಸರ್ವಮಂಗಳ, ಜಯಲಕ್ಷ್ಮಿ, ರೂಪ ಶಿವಕುಮಾರ್ ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳಿಗೆ ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯ ಮುಖ್ಯ

### ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಾಲೇಜಿನ ಕಾರ್ಯಕ್ರಮದಲ್ಲಿ ಶ್ರೀ ಶಾರದೇಶಾನಂದ ಜೀ ಮಹಾರಾಜ್



ದಾವಣಗೆರೆ, ಆ. 26- ಮನುಷ್ಯನಿಗೆ ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯ ಮುಖ್ಯ. ಗುರು-ಹಿರಿಯರನ್ನು ಗೌರವಿಸಬೇಕು. ತಂದೆ-ತಾಯಿಗಳನ್ನು ಪ್ರೀತಿಸಬೇಕು. ಆಗ ಮಾತ್ರ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದು ಶ್ರೀ ಶಾರದೇಶಾನಂದ ಜೀ ಮಹಾರಾಜ್ ಹೇಳಿದರು.

ನಗರದ ಶ್ರೀಮತಿ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ವಿದ್ಯಾರ್ಥಿ ವೇದಿಕೆಯ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ವಿದ್ಯೆಗೆ ವಿನಯವೇ ಭೂಷಣ. ವಿದ್ಯೆ ಇದ್ದರೆ ಏನೆಲ್ಲಾ ಸಾಧಿಸಲು ಸಾಧ್ಯವಿದೆ. ಸಕಾರಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಗುರಿ ಸಾಧನೆಗೆ ಮುಂದಾಗುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪ್ರತಿ ದಿನ, ಪ್ರತಿ ಕ್ಷಣ ಹೋರಾಟ ಜೀವನವಾಗಬೇಕು. ಜೀವನದಲ್ಲಿ ಅವಮಾನ, ಅಪಮಾನಗಳು ಇದ್ದೇ ಇರುತ್ತವೆ. ಅವುಗಳನ್ನು ಮೆಟ್ಟಿ ನಿಲ್ಲಬೇಕು. ಕಲಿಸಿದ ಗುರುಗಳಿಗೆ, ಹೆತ್ತ ತಂದೆ-ತಾಯಿಗಳಿಗೆ ಯಾವತ್ತೂ ಗೌರವ ನೀಡಬೇಕು ಎಂದು ಹಿತ ನುಡಿದರು.

ಹಿರಿಯ ಪತ್ರಕರ್ತ, ಲೇಖಕ ಬಾ.ಮ. ಬಸವರಾಜಯ್ಯ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿ ವೈದ್ಯನಾಗಬೇಕು. ಇಂಜಿನಿಯರ್ ಆಗಬೇಕೆಂಬ ಗುರಿ ಹೊಂದುತ್ತಾನೆ. ಆದರೆ ಯಾವೊಬ್ಬ ವಿದ್ಯಾರ್ಥಿ ಕೂಡ ನಾನೊಬ್ಬ ಪ್ರಗತಿ ಪರ ರೈತನಾಗುತ್ತೇನೆ ಎಂದು ಹೇಳದಿರುವುದು ವಿಷಾದದ ಸಂಗತಿ ಎಂದರು.

ಉನ್ನತ ಶಿಕ್ಷಣ ಮುಗಿಸಿದ ವಿದ್ಯಾರ್ಥಿ ತನ್ನ ಹಳ್ಳಿಗೆ ಬಂದು ಹೊಸ ಹೊಸ ಆವಿಷ್ಕಾರಗಳ ಮೂಲಕ ಗುಡಿ ಕೈಗಾರಿಕೆಗಳಿಗೆ ಪುನಶ್ಚೇತನ ನೀಡಿದರೆ ಅಂತಹ ಗ್ರಾಮ ಅಭಿವೃದ್ಧಿ ಹೊಂದುವ ಜೊತೆಗೆ ಯುವಜನರಿಗೆ ಉದ್ಯೋಗಾವಕಾಶಗಳು ಸಿಗಲಿವೆ ಮತ್ತು ಸ್ವತಂತ್ರ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಚಿಂತನೆ ಇರಬೇಕೆಂದು ಹೇಳಿದರು.

ಪೋಷಕರು ಸಹ ಕೇವಲ ಐಟಿ, ಬಿಟಿಯತ್ತ ತಮ್ಮ ಚಿತ್ತ ಹರಿಸುತ್ತಾರೆ. ವಿದ್ಯಾರ್ಥಿ ಯುವಜನರು ಕೂಡ ಸಮೂಹ ಸನ್ನಿಗೆ ಒಳಗಾಗಿದ್ದಾರೆ. ಸ್ವದೇಶದಲ್ಲಿ ಉನ್ನತ ಪದವಿಗಳನ್ನು ಪಡೆದು ವಿದೇಶಕ್ಕೆ ವಲಸೆ ಹೋಗುತ್ತಾರೆ. ಇದು ಪ್ರತಿಭಾ ಪಲಾಯನ ಮಾಡಿದಂತೆ ಎಂದರು.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಮನೋರಂಜನೆಯ ಸಾಧನವಾಗಿದೆ. ದೃಶ್ಯ ಮಾಧ್ಯಮಗಳು ಸಹ ವಿದ್ಯಾರ್ಥಿಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಗ್ರಾಮೀಣ ಸೊಗಡು, ಜಾನಪದ, ಧಾರ್ಮಿಕತೆ, ವೈಚಾರಿಕತೆ ಮರೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಾಚಾರ್ಯರಾದ ಎಂ.ಪಿ. ರುದ್ರಪ್ಪ, ಬಾಪೂಜಿ ವಿದ್ಯಾಸಂಸ್ಥೆಯ ಖಜಾಂಚಿ ಎ.ಎಸ್. ನಿರಂಜನ್, ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಮತ್ತು ಸಾಧಕರಾದ ಬಿ.ಜೆ. ಮಣಿಕಂಠ, ಅನುಷಾ, ಸಚಿನ್, ಹೆಚ್.ಬಿ. ನವೀನ್, ಅಮೂಲ್ಯ, ಅಬ್ಬಾಸ್ ಅಲಿ ಮತ್ತಿತರರು ಉಪಸ್ಥಿತರಿದ್ದರು.

## ವಿರಕ್ತ ಮಠದಲ್ಲಿಂದು ಬಸವಪ್ರಭು ಶ್ರೀಗಳ ಸಹಜ ಶಿವಯೋಗ

ನಗರದ ವಿರಕ್ತ ಮಠದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿಯವರು ಇಂದು ಸಹಜ ಶಿವಯೋಗ ನಡೆಸಿ ಕೊಡಲಿದ್ದಾರೆ. ಆಸಕ್ತರಿಗೆ ಇಷ್ಟಲಿಂಗ ದೀಕ್ಷೆಯನ್ನು ನೀಡಲಿದ್ದಾರೆ. ಭಕ್ತಾದಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶ್ರೀ ಮಠದ ಪ್ರಕಟಣೆ ತಿಳಿಸಿದೆ.


**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**

**ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.**
**ವರ್ಕಿಂಗ್ ಫಾರ್ಮಾಸಿಸ್ಟ್ ವಿತ್ ಸರ್ಟಿಫಿಕೇಟ್**

**Mediworld Pharma C/o**
**AKP Healthcare Pvt. Ltd**
Hadadi Rd, opp. Taralabalu school,
Shrinivaasa Nagara, Davanagere, Karnataka 577005
**Mob: 96865 52532**

**VACANCY**

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA<br>TALLY / ERP / SAP | 0-1 |
| 02 | Accounts (Senior) | 05 | Bcom / Mcom / MBA<br>GST / INCOME TAX / SAP | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |

**HULLUMANE PROPERTIES & POWER PVT LTD.,**
# Depot Address - Beside Lalitha International School, Behind Shashi Soap Factory
Land Mark-Towards Shiramagondanahalli Road, From Lokikere Road
Lokikere Industrial Area, Davangere-577 005. Karnataka
**Drop Resume to Email - hrhullumanepropertiespwr@yahoo.com**

# ನಮ್ಮಲ್ಲಿರುವ ವಿದ್ಯೆ, ವಿನಯತೆಯೇ ಭವಿಷ್ಯ ನಿರ್ಧರಿಸುವ ಸಾಧನ

## ಎಆರ್‌ಜಿ ವೈಭವದಲ್ಲಿ ಡಾ. ಕೆ. ಶಿವಶಂಕರ್ ಅಭಿಮತ



ದಾವಣಗೆರೆ, ಆ.26- ನಮ್ಮಲ್ಲಿರುವ ವಿದ್ಯೆ ಹಾಗೂ ವಿನಯತೆ ನಮ್ಮ ಭವಿಷ್ಯ ಮತ್ತು ಸ್ಥಾನವನ್ನು ನಿರ್ಧರಿಸುವ ಸಾಧನವಾಗಿವೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಡಾ. ಕೆ. ಶಿವಶಂಕರ್ ವಿದ್ಯಾರ್ಥಿಗಳಿಗೆ ತಿಳಿಸಿದರು.

ಅವರು, ಇಂದು ನಗರದ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಎಆರ್‌ಜಿ ವೈಭವ 2022 ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಸ್ತುತ ಪುನೀತ್ ರಾಜಕುಮಾರ್ ಅಗಲಿಕೆಯ ನಂತರ ಅವರ ಸಮಾಜಮುಖಿ ಕಾರ್ಯಗಳು ಬೆಳಕಿಗೆ ಬಂದವು. ಅವರಿಗೆ ಜಾತಿ, ಮತ, ಧರ್ಮದ ಭೇದವಿಲ್ಲದೆ ರಾಜ್ಯದ ಮೂಲೆ ಮೂಲೆಗಳಲ್ಲಿ ಗೌರವ ಸಲ್ಲಿಸಲಾಗುತ್ತಿದೆ. ಮುಖ್ಯವಾಗಿ ಯುವಜನತೆ ಅವರ ಸಮಾಜಮುಖಿ ಕಾರ್ಯಗಳಿಗೆ ಮನಸೋತು ಮಾದರಿ ವ್ಯಕ್ತಿಯಾಗಿ ಸ್ವೀಕರಿಸಿದ್ದಾರೆ. ಪುನೀತ್ ಅವರಂತೆಯೇ ಜೀವನದಲ್ಲಿ ವಿದ್ಯೆ, ವಿನಯ, ಕೌಶಲ್ಯಗಳನ್ನು ಬೆಳೆಸಿಕೊಂಡು ದುಡಿಮೆಯಲ್ಲಿನ ಒಂದು ಭಾಗದಷ್ಟು ಸಮಾಜಮುಖಿ ಕಾರ್ಯಗಳಿಗೆ ಕೊಡುಗೆಯಾಗಿ ನೀಡಬೇಕು. ಇದರಿಂದ ಸಮಾಜ ಅಭಿವೃದ್ಧಿ ಆಗಲು ಸಾಧ್ಯವಾಗುತ್ತದೆ ಎಂದು ತಿಳುವಳಿಕೆ ಮೂಡಿಸಿದರು.

ಕೇವಲ ಯಶಸ್ಸಿನ ಕನಸನ್ನು ಕಂಡರೆ ಸಾಲದು ಅದನ್ನು ನನಸಾಗಿಸುವ ಪ್ರಾಮಾಣಿಕ ಶ್ರಮವಿರಬೇಕು. ವಿದ್ಯೆ ನಿಮ್ಮಲ್ಲಿದ್ದರೆ ಏನು ಬೇಕಾದರೂ ಸಾಧಿಸಬಹುದು, ಗೆಲ್ಲುಬಹುದು. ಆದ್ದರಿಂದ ನಿರಂತರ ಕಲಿಕೆ ಇರಲಿ. ಆಧುನಿಕತೆಗೆ ತಕ್ಕಂತೆ ನವೀಕರಣವಾಗಬೇಕು. ಇದರಿಂದ ನಿಮ್ಮ ಜ್ಞಾನ ವೃದ್ಧಿಯಾಗುತ್ತದೆ ಎಂದು ಹೇಳಿದರು.

ದೇಶದ ಬಹು ದೊಡ್ಡ ಆಸ್ತಿಯಾಗಿರುವ ಯುವ ಸಮೂಹ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಭಾರತ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾದ ಸೌಕರ್ಯಗಳನ್ನು ಒದಗಿಸುತ್ತಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಂಡು ಭವಿಷ್ಯ ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಶೈಕ್ಷಣಿಕ ಚಟುವಟಿಕೆಗಳಲ್ಲೂ, ಜೀವನದುದ್ದಕ್ಕೂ ಉತ್ಸಾಹ ಎಂದಿಗೂ ಕುಂದಬಾರದು. ನಿರಂತರವಾಗಿರಬೇಕು ಎಂದು ಆಶಿಸಿದರು.

ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ.ಎಸ್. ಬಸವರಾಜಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಇತಿಹಾಸ ವಿಭಾಗದ ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಜೆ. ಅನಿತಾ ಕುಮಾರಿ, ಡಾ. ಚಮನ್ ಸಾಬ್, ಬೊಮ್ಮಣ್ಣ ಸೇರಿದಂತೆ ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ವಾಟ್ಸ್‌ಆಪ್ ಖಾಸಗಿತನ ನೀತಿಗೆ ಹೈಕೋರ್ಟ್ ತರಾಟೆ



ನವದೆಹಲಿ, ಆ. 26 – ವಾಟ್ಸ್‌ಆಪ್‌ನ ಖಾಸಗಿ ತನದ ನೀತಿಯನ್ನು ತರಾಟೆಗೆ ತೆಗೆದು ಕೊಂಡಿರುವ ದೆಹಲಿ ಹೈಕೋರ್ಟ್, ವಾಟ್ಸ್ ಆಪ್ ನೀತಿಯನ್ನು ಒಪ್ಪದ ವರು ಆಪ್ ಬಳಸುವುದನ್ನು ನಿಲ್ಲಿಸುವ ರೀತಿಯ ಧೋರಣೆ ಇದೆ ಎಂದು ಹೇಳಿದೆ.

ವಾಟ್ಸ್‌ಆಪ್ ತನ್ನ ಬಳಕೆದಾರರ ಮಾಹಿತಿಯನ್ನು ಮಾತೃ ಕಂಪನಿಯಾದ ಫೇಸ್‌ಬುಕ್‌ಗೆ ನೀಡುತ್ತಿದೆ. ಈ ಬಗ್ಗೆ ಭಾರತೀಯ ಸ್ಪರ್ಧಾ ಆಯೋಗ ತನಿಖೆಗೆ ಆದೇಶಿಸಿತ್ತು. ತನಿಖೆಯನ್ನು ಪ್ರಶ್ನಿಸಿ ವಾಟ್ಸ್‌ಆಪ್ ಹಾಗೂ ಫೇಸ್‌ಬುಕ್‌ಗಳು ಹೈಕೋರ್ಟ್ ಮೊರೆ ಹೋಗಿದ್ದವು. ಅವುಗಳ ಮನವಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹಾಗೂ ನ್ಯಾಯಮೂರ್ತಿ ಸುಬ್ರ ಮಣ್ಯಂ ಪ್ರಸಾದ್ ಅವರನ್ನು ಒಳಗೊಂಡ ಪೀಠ ತನಿಖೆಯ ಪರ ಆದೇಶ ಹೊರಡಿಸಿದೆ. ತನಿಖೆ ನಡೆಸುವುದರ ಪರವಾಗಿ ಏಪ್ರಿಲ್ 22, 2021ರಂದು ಏಕ ಸದಸ್ಯ ಪೀಠ ಹೊರಡಿಸಿರುವ ಆದೇಶ ಸಕಾರಣವಾಗಿದೆ ಎಂದು ಹೈಕೋರ್ಟ್ ಹೇಳಿದೆ.

ವಾಟ್ಸ್‌ಆಪ್ ತನ್ನ ಖಾಸಗಿ ತನದ ನೀತಿಯನ್ನು ಬದಲಿಸಿರುವ ಬಗ್ಗೆ ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ಆಧರಿಸಿ ಸ್ಪರ್ಧಾ ಆಯೋಗ ತನಿಖೆಗೆ ಆದೇಶಿಸಿತ್ತು.

ವಾಟ್ಸ್‌ಆಪ್‌ನ ಖಾಸಗಿತನ ನೀತಿಯು 2002ರ ಸ್ಪರ್ಧಾ ಕಾಯ್ದೆ ಯ ಅಂಶಗಳ ಉಲ್ಲಂಘನೆ ಎಂಬುದು ಮೇ ಲ್ನೋಟಕ್ಕೆ ಕಂಡು ಬರುತ್ತಿದೆ. ಈ ಬಗ್ಗೆ ತನಿಖೆ ನಡೆಯಬೇಕಿದೆ ಎಂದು ಹೈಕೋರ್ಟ್ ಹೇಳಿದೆ.

ವಾಟ್ಸ್‌ಆಪ್‌ನ 2016ರ ನೀತಿಯಲ್ಲಿ ಖಾಸಗಿ ಮಾಹಿತಿಯನ್ನು ಫೇಸ್‌ಬುಕ್ ಜೊತೆ ಹಂಚಿಕೊಳ್ಳದಂತೆ ತಡೆಯುವ ಆಯ್ಕೆ ಇತ್ತು. ಆದರೆ, 2021ರಲ್ಲಿ ಕಂಪನಿ ನೀತಿ ಒಪ್ಪದೇ ಇರುವವರು ಆಪ್‌ನಿಂದ ಹೊರ ಹೋಗ ಬೇಕಿದೆ ಎಂದು ಹೈಕೋರ್ಟ್ ಹೇಳಿದೆ.

ಮಾಹಿತಿ ಹಂಚಿಕೆ ವಿಷಯದಲ್ಲಿ ಫೇಸ್ ಬುಕ್ ನೇರ ಫಲಾನುಭವಿಯಾಗಿದೆ. ಹೀಗಾಗಿ ಅದು ಹೊಣೆಗಾರಿಕೆಯಿಂದ ನುಣುಚಿಕೊಳ್ಳು ವಂತಿಲ್ಲ. ಅದರ ವಿರುದ್ಧವೂ ತನಿಖೆ ನಡೆಯಬೇಕು ಎಂದು ಹೈಕೋರ್ಟ್ ಹೇಳಿದೆ.


# ಬಸವೇಶ್ವರ - ದಾನಮ್ಮ ದೇವಸ್ಥಾನದಲ್ಲಿ ಇಂದು ಬೆನಕನ ಅಮಾವಾಸ್ಯೆ ಪೂಜೆ



ದಾವಣಗೆರೆ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ದಾನಮ್ಮ ದೇವಿ ದೇವಸ್ಥಾನದಲ್ಲಿ ಇಂದು ಬೆನಕನ ಅಮಾವಾಸ್ಯೆ ಪೂಜೆ ಏರ್ಪಡಿಸಲಾಗಿದೆ. ಬೆಳಿಗ್ಗೆ ಅಭಿಷೇಕ ಮತ್ತು ವಿಶೇಷ ಹೂವಿನ ಅಲಂಕಾರ ಪೂಜೆ ಹಾಗೂ ಮಧ್ಯಾಹ್ನ ದಾಸೋಹ ಏರ್ಪಡಿಸಲಾಗಿದೆ.

ಶ್ರೀಮತಿ ಬೇತೂರು ಭಾರತಿ ದಿ. ಬಸವರಾಜಪ್ಪ ಮತ್ತು ಮಕ್ಕಳು, ಶ್ರೀಮತಿ ಬೇತೂರು ಲೀಲಾ ಮಲ್ಲಿಕಾರ್ಜುನಪ್ಪ ಮತ್ತು ಮಕ್ಕಳು, ರವಿಶಂಕರ್ ಮತ್ತು ಕುಟುಂಬದವರು (ರವಿ ಬೆಣ್ಣೆದೋಸೆ ಹೋಟೆಲ್), ಎಂ.ವಿ. ಪರಮೇಶ್ವರಪ್ಪ ಮತ್ತು ಮಕ್ಕಳು (ಜ್ಯೋತಿ ಎಲೆಕ್ಟ್ರಿಕಲ್) ಶ್ರೀಮತಿ ಉಷಾ ಚಂದ್ರಶೇಖರ್ ಮತ್ತು ಮಕ್ಕಳು (ಧಾರವಾಡ ಶೆಟ್ಟರು), ಶ್ರೀಮತಿ ಕೊಟ್ರಮ್ಮ ವೀರಪ್ಪ ಎಮ್ಮಿ, ರವಿ ಮಂಜುಳ ವೈಭವ್ ಮತ್ತು ಕುಟುಂಬದವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

# ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು 108 ಲೀಟರ್ ಕ್ಷೀರಾಭಿಷೇಕ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ಇಂದು ವಿಶೇಷ ಪೂಜೆಗಳು ನಡೆಯಲಿವೆ.

ಶ್ರಾವಣ ಮಾಸದ ಪ್ರಯುಕ್ತ ವಿಶೇಷವಾಗಿ ಪ್ರಧಾನ ದೇವತೆ ಶ್ರೀ ಅನ್ನಪೂರ್ಣೇಶ್ವರಿ ಮಾತೆಗೆ 108 ಲೀಟರ್ ಕ್ಷೀರಾಭಿಷೇಕ ಮತ್ತು ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಮತ್ತು ಇತರೆ ಕಾರ್ಯಕ್ರಮಗಳು ಜರುಗಲಿವೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ವಸಂತಮ್ಮ ಮತ್ತು ವಸಂತರಾವ್ ಸಬಾಳೆ ಮಕ್ಕಳು ಹಾಗೂ ಕುಟುಂಬದವರು ಪೂಜಾ ಕಾರ್ಯಕ್ರಮದ ಸೇವಾಕರ್ತರಾಗಿದ್ದಾರೆ.

# 10 ಲಕ್ಷ ಯುವ ಜನತೆಗೆ ಕೌಶಲ್ಯ ತರಬೇತಿ

ಬೆಂಗಳೂರು, ಆ. 26 - ರಾಜ್ಯದ ಯುವ ಜನರಿಗೆ ಸೂಕ್ತ ಉದ್ಯೋಗಾವಕಾಶಗಳು ಸಿಗುವಂತಾಗಬೇಕು ಎನ್ನುವ ಗುರಿಯೊಂದಿಗೆ ಈವರೆಗೆ 10 ಲಕ್ಷಕ್ಕೂ ಹೆಚ್ಚು ಯುವಜನರಿಗೆ ಕೌಶಲ್ಯ ತರಬೇತಿ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಇಂದು ಏರ್ಪಡಿಸಿದ್ದ ಉದ್ಯೋಗ ಮೇಳ 'ಪ್ರಗತಿ ಪಥ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ಉದ್ಯೋಗ ಮೇಳದಲ್ಲಿ 200ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿವೆ. ಇದರಲ್ಲಿ 5 ಸಾವಿರಕ್ಕೂ ಹೆಚ್ಚು ಮಂದಿ ಆನ್ ಲೈನ್ ನೋಂದಣಿ ಮಾಡಿಕೊಂಡು ಪಾಲ್ಗೊಂಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ಯುವ ಜನರನ್ನು ಉದ್ಯೋಗಗಳಿಗೆ ಅರ್ಹರನ್ನಾಗಿ ಮಾಡಲು ಸರ್ಕಾರ ಸಿದ್ಧವಾಗಿದೆ. ಹೀಗಾಗಿ ಪದವಿ ಕೋರ್ಸುಗಳಲ್ಲಿ ಡಿಜಿಟಲ್, ಹಣಕಾಸು ಮತ್ತು ತಂತ್ರಜ್ಞಾನ ಸಾಕ್ಷರತೆಗಳನ್ನು ಕಡ್ಡಾಯಗೊಳಿಸಲಾಗಿದೆ ಎಂದು ಅವರು ವಿವರಿಸಿದರು.

# ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಇಂದು ವಿಶೇಷ ಪೂಜೆ, ಅನ್ನ ಸಂತರ್ಪಣೆ

ದಾವಣಗೆರೆಯ ಕೊಟ್ಟೂರು ಪಾದಯಾತ್ರೆ ಸಮಿತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ 6.30 ರಿಂದ 7.30 ರವರೆಗೆ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ.

ನಂತರ ಬೆಳಿಗ್ಗೆ 8ರಿಂದ ಮಧ್ಯಾಹ್ನದವರೆಗೆ ಪ್ರಸಾದ ದಾಸೋಹವನ್ನು ಏರ್ಪಡಿಸಲಾಗಿದೆ. ಸರ್ವ ಭಕ್ತಾದಿಗಳು ಈ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕು ಎಂದು ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (94483 56968) ಕೋರಿದ್ದಾರೆ.

# ಮೋದಿ ಕೈಗೊಂಬೆ, ಬಣ್ಣ ಬಯಲಾಗಿದೆ ಆಜಾದ್ ರಾಜೀನಾಮೆಗೆ ಕಾಂಗ್ರೆಸ್ ತರಾಟೆ

ನವದೆಹಲಿ, ಆ. 26 – ರಾಜೀನಾಮೆ ನೀಡಿರುವ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರನ್ನು ತೀವ್ರ ತರಾಟೆಗೆ ತೆಗೆದು ಕೊಂಡಿರುವ ಕಾಂಗ್ರೆಸ್, ಪಕ್ಷಕ್ಕೆ ರಾಜೀನಾಮೆ ನೀಡಿರುವುದು ಅವರ ನಿಜವಾದ ಬಣ್ಣ ಬಯಲು ಮಾಡಿದೆ ಎಂದಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕೈಗೊಂಬೆಯಾಗಿರುವ ಆಜಾದ್, ರಾಜ್ಯಸಭಾ ಸದಸ್ಯತ್ವದ ಅವಧಿ ಮುಗಿಯುತ್ತಿದ್ದಂತೆ ರಾಜೀನಾಮೆ ನೀಡಿದ್ದಾರೆ ಎಂದು ಕಾಂಗ್ರೆಸ್ ತಿಳಿಸಿದೆ.

ಅವರು ರಾಜೀನಾಮೆ ನೀಡಿದ ಸಮಯ ನೋಡಿದಾಗ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕೈಗೊಂಬೆಯಾಗಿರುವುದು ಸ್ಪಷ್ಟವಾಗುತ್ತದೆ. ಸಂಸತ್ತಿನಲ್ಲೂ ಉಭಯರ ನಡುವೆ ಇದ್ದ 'ಪ್ರೀತಿ' ಬಯಲಾಗಿತ್ತು ಎಂದು ಕಾಂಗ್ರೆಸ್ ಲೇವಡಿ ಮಾಡಿದೆ.

ಆಜಾದ್ ಅವರ ರಾಜ್ಯಸಭಾ ಅವಧಿ ಮುಗಿಯುತ್ತಿದ್ದ ಸಂದರ್ಭದಲ್ಲಿ ಪ್ರಧಾನಿ ಮೋದಿ ಕಣ್ಣೀರು ಹಾಕಿದರು. ನಂತರ ಅವರಿಗೆ ಪದ್ಮವಿಭೂಷಣ ಕೊಟ್ಟರು. ಆನಂತರ ಅವರ ವಸತಿಯ ಅವಧಿ ವಿಸ್ತರಣೆ ಮಾಡಿದರು. ಇದೆಲ್ಲವೂ ಆಕಸ್ಮಿಕ ಅಲ್ಲ, ಹೊಂದಾಣಿಕೆ ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಕಾಂಗ್ರೆಸ್‌ನಲ್ಲಿ ಅತಿ (5ನೇ ಪುಟಕ್ಕೆ)

## ಶ್ರೀ ಎಂ.ಪಿ. ಉಮಾಪತಿ ನಿಧನ



ನಾಯಕನಹಟ್ಟಿ ಗ್ರಾಮದ ವಾಸಿ

**ಶ್ರೀ ಎಂ.ಪಿ. ಉಮಾಪತಿ,** ಮಾಲೀಕರು, ಜಯಲಕ್ಷ್ಮಿ ಬೋರ್‌ವೆಲ್ಸ್

ಇವರು ದಿನಾಂಕ 26.8.2022ರ ಶುಕ್ರವಾರ ಬೆಳಿಗ್ಗೆ 10.50ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.8.2022ರ ಮಧ್ಯಾಹ್ನ 3 ಗಂಟೆಗೆ ಮೃತರ ಸ್ವಗ್ರಾಮ ನಾಯಕನಹಟ್ಟಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ ಮತ್ತು ಮಿತ್ರರು.

88614 82888, 98861 83555

## ಕು.ಎಂ.ಶಶಿಧರ್ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ ವಾಸಿ

(60 ಅಡಿ ರಸ್ತೆ, ಬೆಳ್ಳೂಡಿ ಹೌಸ್)

ಶ್ರೀ ಮಂಜುನಾಥ (ಟೈಲರ್) ಶ್ರೀಮತಿ ಚಂದ್ರಕಲಾ ದಂಪತಿಗಳ ಪುತ್ರ

**ಶ್ರೀ ಎಂ. ಶಶಿಧರ್**

ಇವರು ದಿನಾಂಕ 26.8.2022ರ ಶುಕ್ರವಾರ ಅಕಾಲಿಕವಾಗಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 19 ವರ್ಷ ವಯಸ್ಸಾಗಿತ್ತು. ತಂದೆ, ತಾಯಿ, ಅಕ್ಕ, ಸ್ನೇಹಿತರು ಸೇರದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.8.2022ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್‌ಹೌಸ್ ಹತ್ತಿರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದು:ಖತಪ್ತ ಕುಟುಂಬ ವರ್ಗ

ಶ್ರೀ ಮಂಜುನಾಥ ಮತ್ತು ಶ್ರೀಮತಿ ಚಂದ್ರಕಲಾ, ದಾವಣಗೆರೆ.

99002-55448, 95389-94929







ನೋಂದಣಿ ಸಂಖ್ಯೆ : ಎ.ಆರ್.31/ಸೌಹಾರ್ದ/ಆರ್.ಜಿ.ಎನ್./601-2003-04 ಸ್ಥಾಪನೆ : 23-11-2000

## ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,

# 2688/2, 'ಕರಾವಳಿ ಸೌಧ', ಡಾ. ಶ್ಯಾಮಸುಂದರ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರಸ್ತೆ, ದಾವಣಗೆರೆ-577 006. ಫೋ. : 08192-296516



ಶ್ರೀ ಸಿ.ಎ. ಉಮೇಶ್ ಶೆಟ್ಟಿ, ಅಧ್ಯಕ್ಷರು; ಶ್ರೀ ದಿನೇಶ್ ಕೆ. ಶೆಟ್ಟಿ, ನಿರ್ದೇಶಕರು; ಶ್ರೀ ರವೀಂದ್ರ ಎಸ್. ಶೆಟ್ಟಿ, ನಿರ್ದೇಶಕರು; ಶ್ರೀ ಡಾ. ಸುಬೋದ್ ಶೆಟ್ಟಿ, ನಿರ್ದೇಶಕರು; ಶ್ರೀ ಕೆ. ಮೋಹನದಾಸ್ ಶೆಟ್ಟಿ, ನಿರ್ದೇಶಕರು; ಶ್ರೀ ಸೀತಾರಾಮ್ ಶೆಟ್ಟಿ, ನಿರ್ದೇಶಕರು; ಶ್ರೀಮತಿ ಆಶಾ ಕುಶಾಲಶೆಟ್ಟಿ, ನಿರ್ದೇಶಕರು; ಶ್ರೀಮತಿ ವಿಮಲಾ ಎಸ್. ಶೆಟ್ಟಿ, ನಿರ್ದೇಶಕರು; ಶ್ರೀ ವೆಂಕಟೇಶ್ ಹೆಚ್.ಎಲ್., ನಿರ್ದೇಶಕರು; ಶ್ರೀ ಖಲೀಲ್ ಅಹಮದ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ; ಶ್ರೀ ಮಹೇಶ್ ಆರ್. ಶೆಟ್ಟಿ, ಉಪಾಧ್ಯಕ್ಷರು

## 22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸು

ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ದಾವಣಗೆರೆ ಇದರ 22ನೇ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿ.ಎ. ಉಮೇಶ್ ಶೆಟ್ಟಿ ಇವರ ಘನ ಅಧ್ಯಕ್ಷತೆಯಲ್ಲಿ **ದಿನಾಂಕ : 27.08.2022ರ ಶನಿವಾರ ಬೆಳಗ್ಗೆ 11.30 ಗಂಟೆಗೆ ಸರಿಯಾಗಿ ಸ್ಥಳ : ಡಾ. ಬಿ. ಶ್ಯಾಮಸುಂದರ್ ಶೆಟ್ಟಿ ಭಂಟರ ಭವನ,** ಕುಂದವಾಡ ರಸ್ತೆ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕ್ರೀಯವಾಗಿ ಪಾಲ್ಗೊಳ್ಳಲು ವಿನಂತಿ. ಇದೇ ಸಂದರ್ಭದಲ್ಲಿ ಸ್ವಚ್ಛ ದಾವಣಗೆರೆಯಾಗಿಸಲು ಸೇವೆ ಸಲ್ಲಿಸಿದ ಪೌರ ಕಾರ್ಮಿಕರನ್ನು ಸನ್ಮಾನಿಸಿ, ಗೌರವಿಸಲಾಗುವುದು. ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಆಡಳಿತ ಮಂಡಳಿ ಪರವಾಗಿ

ಸಹಿ/– ಶ್ರೀ ಖಲೀಲ್ ಅಹಮದ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte